ಸಂಪುಟ 01 | ಸಂಚಿಕೆ 137 | ಭಾನುವಾರ 05 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಬಾಬು ಜಗಜೀವನ್ ರಾಮ್ ಜಯಂತಿ**

ಬಾಬು ಜಗಜೀವನ್ ರಾಮ್ ಜಯಂತಿಯನ್ನು ಪ್ರತಿವರ್ಷ ಏಪ್ರಿಲ್ 5 ರಂದು ಆಚರಿಸಲಾಗುತ್ತದೆ. ಇವರು ಭಾರತದ ಮಾಜಿ ಉಪ ಪ್ರಧಾನಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ದಲಿತರ ಹಕ್ಕುಗಳಿಗಾಗಿ ಮತ್ತು ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದ ಇವರನ್ನು 'ಬಾಬೂಜಿ' ಎಂದು ಕರೆಯಲಾಗುತ್ತದೆ. ಇವರ ಜನ್ಮದಿನವು ಸಾಮಾಜಿಕ ನ್ಯಾಯದ ಹರಿಕಾರರ ಸ್ಮರಣೆಯ ದಿನವಾಗಿದೆ.

**2) ಈಸ್ಟರ್ ಭಾನುವಾರ**

ಏಪ್ರಿಲ್ 20 ಈಸ್ಟರ್ ಭಾನುವಾರವನ್ನು ಸೂಚಿಸುತ್ತದೆ, ಇದು ಭರವಸೆ, ನವೀಕರಣ ಮತ್ತು ಹೊಸ ಆರಂಭಗಳ ಸಂತೋಷದಾಯಕ ಆಚರಣೆಯಾಗಿದೆ. ಕುಟುಂಬಗಳು ಹಬ್ಬದ ಊಟ, ಮೊಟ್ಟೆ ಬೇಟೆ ಮತ್ತು ಪುನರುತ್ಥಾನ ಮತ್ತು ಪ್ರೀತಿಯ ಚೈತನ್ಯವನ್ನು ಪ್ರತಿಬಿಂಬಿಸಲು ಒಟ್ಟಿಗೆ ಸೇರುತ್ತಾರೆ.

**3) ರಾಷ್ಟ್ರೀಯ ಕಡಲ ದಿನ**

ಭಾರತದಲ್ಲಿ ಪ್ರತಿ ವರ್ಷ ಏಪ್ರಿಲ್ 5 ರಂದು ರಾಷ್ಟ್ರೀಯ ಕಡಲ ದಿನವನ್ನು ಆಚರಿಸಲಾಗುತ್ತದೆ ಏಕೆಂದರೆ 1919 ರಲ್ಲಿ ಈ ದಿನಾಂಕದಂದು ಸಿಂಧಿಯಾ ಸ್ಟೀಮ್ ನ್ಯಾವಿಗೇಷನ್ ಕಂಪನಿ ಲಿಮಿಟೆಡ್‌ನ ಮೊದಲ ಹಡಗು ಯುನೈಟೆಡ್ ಕಿಂಗ್‌ಡಮ್‌ಗೆ ಪ್ರಯಾಣ ಬೆಳೆಸಿತು. ಇದು ಭಾರತೀಯ ನೌಕಾಯಾನದ ಖಾತೆಯಲ್ಲಿ ಸ್ಮರಣೀಯ ದಿನವಾಗಿತ್ತು. ಸಂಚರಣ ಇತಿಹಾಸವು ಸೃಷ್ಟಿಯಾದ ದಿನಾಂಕ 1919

**4) ಅಂತರರಾಷ್ಟ್ರೀಯ ಆತ್ಮಸಾಕ್ಷಿಯ ದಿನ**

ಮಾನವ ಆತ್ಮಸಾಕ್ಷಿಯ ಮಹತ್ವವನ್ನು ಗುರುತಿಸಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂತರರಾಷ್ಟ್ರೀಯ ಆತ್ಮಸಾಕ್ಷಿಯ ದಿನವನ್ನು ಆಚರಿಸುತ್ತದೆ. ಪ್ರಾಣಿ ಸಾಮ್ರಾಜ್ಯದ ಉಳಿದ ಭಾಗಗಳಿಂದ ಮನುಷ್ಯರನ್ನು ಪ್ರತ್ಯೇಕಿಸುವ ಅತ್ಯಗತ್ಯ ಬೌದ್ಧಿಕ ಲಕ್ಷಣವೆಂದರೆ ಆತ್ಮಸಾಕ್ಷಿ.

## ಸುಭಾಷಿತ

ನಿಮ್ಮ ಜೀವನದಲ್ಲಿ ಸೂರ್ಯ ಮರೆಯಾದನೆಂದು
ನೀವು ಅತ್ತರೆ, ಹೊಳೆಯುವ ನಕ್ಷತ್ರಗಳು
ಕಾಣಿಸಲು ಕಣ್ಣೀರು ಅಡ್ಡಿಯಾಗುತ್ತದೆ.

ರವೀಂದ್ರನಾಥ ಟ್ಯಾಗೋರ್

# ವಿಧಾನಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುತ್ತಿಲ್ಲ :ಅಣ್ಣಾಮಲೈ ಸ್ಪಷ್ಟನೆ

**ಚೆನ್ನೈ: ತಾವು ಈ ಬಾರಿ ತಮಿಳುನಾಡಿನ ವಿಧಾನಸಭಾ ಚುನಾವಣೆಯ ಸ್ಪರ್ಧೆಯಲ್ಲಿ ಇಲ್ಲ. ಇದರ ಬಗ್ಗೆ ಅನಗತ್ಯವಾಗಿ ಗೊಂದಲಗಳು ಬೇಡ ಎಂದು ಬಿಜೆಪಿ ನಾಯಕ ಕೆ. ಅಣ್ಣಾಮಲೈ ಹೇಳಿದ್ದಾರೆ.**



ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಲ್ಲಿ ತಮ್ಮ ಹೆಸರಿಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತ- ರಿಸಿದ ಅಣ್ಣಾಮಲೈ, ನಾನು ಸ್ಪರ್ಧೆಯಲ್ಲಿ ಅಥವಾ ಪಟ್ಟಿಯಲ್ಲಿಲ್ಲ. ಈ ಚುನಾವಣೆಯಲ್ಲಿ ನನ್ನ ಪಾತ್ರ ತಮಿಳುನಾಡಿನಾದ್ಯಂತ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದು. ಇದೀಗ ಪಕ್ಷವು ಪುದುಚೇರಿ ಮತ್ತು ಕೇರಳದಲ್ಲಿ ಏಪ್ರಿಲ್ 7 ರವರೆಗೆ ಮತ್ತು ಅಂದಿನಿಂದ ಏಪ್ರಿಲ್ 23ರವರೆಗೆ ತಮಿಳುನಾಡಿನಲ್ಲಿ ಪ್ರಚಾರ ಮಾಡುವ ಜವಾಬ್ದಾರಿಯನ್ನು ನೀಡಿದೆ. ನಾನು ಆ ಜವಾಬ್ದಾರಿಯನ್ನು ಪೂರೈಸುತ್ತೇನೆ ಎಂದು ಹೇಳಿದರು. ಹೈಕಮಾಂಡ್‌ಗೆ ಅನುಮೋದನೆಗಾಗಿ ಕಳುಹಿಸಲಾದ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯಲ್ಲಿಯೂ ನನ್ನ ಹೆಸರು ಇರಲಿಲ್ಲ. ನನಗೆ ಟಿಕೆಟ್ ನಿರಾಕರಿಸಲಾಗಿದೆ ಎಂದಲ್ಲ. ಸತ್ಯವೆಂದರೆ ನಾನು ಸ್ಪರ್ಧಿಸದಿರಲು ನಿರ್ಧರಿಸಿದ್ದೆ. ನಾನು ಯಾವುದೇ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂದು ಕೋರ್ ಸಮಿತಿಗೆ ಈಗಾಗಲೇ ಲಿಖಿತವಾಗಿ ತಿಳಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು.

ತಮಿಳುನಾಡು ಬಿಜೆಪಿ ಚುನಾವಣಾ ಉಸ್ತುವಾರಿ ಮತ್ತು ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರಿಗೂ ಅವರು ತಮ ನಿರ್ಧಾರವನ್ನು ತಿಳಿಸಿದ್ದರು. ಅಲ್ಲದೆ, ಅವರು ಇದನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ ಎಲ್ ಸಂತೋಷ್ ಮತ್ತು ಬಿಜೆಪಿ ಮುಖ್ಯಸ್ಥ ನಿತಿನ್ ನಬಿನ್ ಅವ- ರಿಗೆ ತಿಳಿಸಿದ್ದರು ಎಂದು ಅಣ್ಣಾಮಲೈ ಹೇಳಿದರು. ತಮ ನಿರ್ಧಾರವನ್ನು ಗೌರವಿಸಿದ್ದಕ್ಕಾಗಿ ಮತ್ತು ಎನ್‌ಡಿಎ ಅಭ್ಯರ್ಥಿಗಳನ್ನು ಬೆಂಬಲಿಸಿ ಪ್ರಚಾರ ಮಾಡಲು ಅವಕಾಶ ನೀಡಿದ್ದಕ್ಕಾಗಿ ಬಿಜೆಪಿ ನಾಯಕತ್ವಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ಅಣ್ಣಾಮಲೈ ತಿಳಿಸಿದರು. ಮೋದಿ ಅವರೊಂದಿಗಿನ ಭೇಟಿಯ ಕುರಿತು ಮಾತನಾಡಿದ ಅವರು, ಚುನಾವಣೆಯ ಸಮಯದಲ್ಲಿ ಇದು ಸಾಮಾನ್ಯ ಚರ್ಚೆಯಾಗಲಿದೆ. ಪ್ರಧಾನಿಯೊಂದಿಗೆ ಸಂವಹನ ನಡೆಸಲು ಇದನ್ನು ಒಂದು ಅವಕಾಶವೆಂದು ನಾನು ನೋಡುತ್ತೇನೆ ಎಂದು ಹೇಳಿದರು.

ಇದಕ್ಕೂ ಮೊದಲು, ಉತ್ತರ ಕೇರಳದಲ್ಲಿ ತಮ ಪ್ರಚಾರದ ಮಧ್ಯೆ, ಅಣ್ಣಾಮಲೈ ಎಕ್?ಸನಲ್ಲಿ ಮಾಡಿದ್ದ ಪೋಸ್ಟ್‌ನಲ್ಲಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ 210 ಸ್ಥಾನಗಳನ್ನು ಗೆಲ್ಲುವ ಗುರಿಯೊಂದಿಗೆ, ನಾನು ಕಾರ್ಯಕರ್ತರಾಗಿ ನಮ ಎಲ್ಲಾ ಗೆಲ್ಲುವ ಬಿಜೆಪಿ ಮತ್ತು ಇತರ ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಹಗಲಿಗೆ ಹಗಲು ಕೊಟ್ಟು ಪ್ರಚಾರ ಮಾಡುತ್ತೇನೆ ಎಂದು ಗೊಂದಲಗಳಿಗೆ ತೆರೆಎಳೆಯುವ ಪ್ರಯತ್ನ ಮಾಡಿದ್ದರು.

# ಅಕ್ಕಮಹಾದೇವಿ ವಚನಗಳಲ್ಲಿ ಸಾಮಾಜಿಕ ಚಿಂತನೆ: ಶಿವಲಿಂಗಮ್ಮ



ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಮಹಾದೇವಿಯಕ್ಕನವರು ಅಪ್ರತಿಮ ವಚನಕಾರ್ತಿಯಾಗಿದ್ದು ಅವರ ವಚನಗಳಲ್ಲಿ **ಭಕ್ತಿ, ಜ್ಞಾನ, ಸಾಮಾಜಿಕ ಚಿಂತನೆಗಳಿವೆ ಎಂದು ಹಿರಿಯಶರಣೆ ಶಿವಲಿಂಗಮ್ಮ ಬಳಗಾನೂರ ಹೇಳಿದರು ಅವರು ಪಟ್ಟಣದ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ತಾಲ್ಲೂಕು ಕದಳಿ ವೇದಿಕೆ ಮತ್ತು ಅಕ್ಕನ ಬಳಗ ಇವರ ಸಂಂ- ಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಶಿವಶರಣೆ ವೈರಾಗ್ಯನಿಧಿ ಅಕ್ಕಮಹಾದೇವಿ ಅವರ ಜಯಂತಿ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದರು.**

ನಿವೃತ್ತ ಮುಖ್ಯಶಿಕ್ಷಕಿ ಉಮಾ ಸಾಲಂಕಿ ಮಾತನಾಡಿ, ಕನ್ನಡದ ಮೊದಲ ಕವಯತ್ರಿಯಾಗಿದ್ದು ಅವರ ವಚನಗಳು ಜೀವನ ಮಾರ್ಗದರ್ಶನ ಮಾಡುತ್ತವೆ ಎಂದರು. ಕದಳಿ ವೇದಿಕೆ ಅಧ್ಯಕ್ಷೆ ಉಮಾ ಫೀವಾರಿ ಮಾತನಾಡಿ, ಅಕ್ಕನವರು ಭಕ್ತಿ, ಜ್ಞಾನ, ವೈರಾಗ್ಯಗಳ ಮೂರ್ತಿಯಾಗಿದ್ದಾರೆ ಎಂದರು. ಅಕ್ಕಮಹಾದೇವಿವರ ವಚನಗಳನ್ನು ಹೇಳಲಾಯಿತು. ಕಾರ್ಯಕ್ರಮದಲ್ಲಿ ಕವಿತಾ ಕತ್ತಿ, ಸರ್ವಮಂಗಳಾ ಡೋಣೂರಮಠ, ಶಿವಲೀಲಾ ದೇವಶೆಟ್ಟಿ, ಗೀತಾ ಬಳಗಾನೂರ, ಸುರೇಖಾ ಸಾಲಂಕಿ, ಜಯಶ್ರೀ ಮಠ, ಸವಿತಾ ಕತ್ತಿ ಸೇ- ರಿದಂತೆ ಅಕ್ಕನ ಬಳಗ ಹಾಗೂ ಕದಳಿ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬೆಳಿಗ್ಗೆ ಅಕ್ಕನ ಮೂರ್ತಿಗೆ ಪೂಜೆ, ರುದ್ರಾಭಿಷೇಕ , ನಾಮಾವಳಿ, ಆರತಿ ಹಾಗೂ ವಚನ ಗಾಯನ, ಅಕ್ಕನ ತೊಟ್ಟಿಲು ಕಾರ್ಯಕ್ರಮ ಜರುಗಿತು. ಮಧ್ಯಾಹ್ನ ಉಡಿ ತುಂಬವ ಕಾರ್ಯಕ್ರಮ ನಂತರ ಮಹಾಪ್ರಸಾದ ನಡೆಯಿತು.

# ಮದ್ಲಾಪುರಿನಲ್ಲಿ ಎಂ.ಪಿ.ಎಲ್ ಕ್ರಿಕೇಟ್ ಟೂರ್ನಮೆಂಟ್ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್



**ಮಾನ್ವಿ: ತಾಲೂಕಿನ ಮದ್ಲಾಪುರ ಗ್ರಾಮದಲ್ಲಿ ಒಟ್ಟು ಎಂಟು ತಡಂಗಳು ಒಂದರಂತೆ 14 ಆಟಗಾರರನ್ನು ಆಯ್ಕೆ ಮಾಡಿ ಒಟ್ಟು 112 ಆಟಗಾರರನ್ನು ಒಳಗೊಂಡ ಕ್ರಿಕೇಟ್ ನ ಸಿಸನ್ 02 ಆರಂಭಗೊಂಡಿದೆ.**

ಎಂ. ಮಿಸ್ಟ್ 360 ತಂಡದ ಭೀಮೇಶ್ ನಾಯಕ, ಎಂ. ವಿರಾಟ್ ಚಾಲೆಂಜರ್ಸ್ ನ ಶೀವುಕುಮಾರ್ ಬಸವರಾಜ, ಎಂ. ರಾಯಲ್ ನ ಡಾ. ಮಹಿಬೂಬ್ ಮದ್ಲಾಪುರ, ಎಂ. ಬುಲ್ಡೋಜರ್ಸ್ ನ ವಿನಯ ಕುಮಾರ್, ಎಂ. ಸುಪರ್ ಕಿಂಗ್ ಹನುಮಂತ, ಎಂ. ಇಂಡಿಂ- ಯನ್ಸ್ ಈರಣ್ಣ, ಕಿಂಗ್ಸ್ 11 ಎಲ್ಲೇಶ ತಂಡದ ಮಾಲಿಕರಾಗಿರುತ್ತಾರೆ.

ಉದ್ಘಾಟನಾವೆಳೆಯಲ್ಲಿ ವೆಂಕಟೇಶ ನಿವೃತ್ತ ಶಿರಸ್ಥಾರರು, ಗ್ರಾ.ಪಂ.ಸದಸ್ಯ ಬಸವರಾಜ, ಮುಖಂಡರಾದ ಶರಣಪ್ಪಗೌಡ, ತಿಮ್ಮಯ್ಯ ನಾಯಕ, ವಿನಯ ಕುಮಾರ್, ಹನುಮಂತ ನಾಯಕ, ಅರಣ್ಯ ಇಲಾಖೆಯ ಭೀಮೇಶ್ ನಾಯಕ ಹುಸೇನ್ ಭಾಷ, ಪಾಂಡು, ಅಂಬಣ್ಣ, ಈರಣ್ಣ, ನಾಗರಾಜ, ರವಿಭೋವಿಕರ್, ಸುಭಾಷ, ಅಯ್ಯಪ್ಪ, ಕೃಷ್ಣ, ಶೀವುಮೂರ್ತಿ. ಕ್ರೀಡಾಪಟುಗಳು ಭಾಗಿಯಾಗಿರುತ್ತಾರೆ.

# ಮಾತೃಶ್ರೀ ಹೇಮಾವತಿ ಹೆಗ್ಗಡೆ ಹುಟ್ಟುಹಬ್ಬದ ಅಂಗವಾಗಿ ಹಾಲು-ಹಣ್ಣು ವಿತರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಧರ್ಮಸ್ಥಳದ ಧರ್ಮಾಧಿಕಾ- ರಿಗಳಾದ ಡಿ. ವೀರೇಂದ್ರ ಹೆಗ್ಗಡೆ ಅವರ ಪತ್ನಿ ಹಾಗೂ ಸಮಾಜ ಸೇವಕಿ ಹೇಮಾವತಿ ವಿ. ಹೆಗ್ಗಡೆ ಅವರ ಜನ್ಮದಿನದ ಅಂಗವಾಗಿ ಮಾನ್ವಿ ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಟ್ರಸ್ಟ್ ವತಿಯಿಂದ ವಿಶೇಷ ಸೇವಾ ಕಾರ್ಯಕ್ರಮ ನಡೆಯಿತು.**



ಈ ಸಂದರ್ಭದಲ್ಲಿ ತಾಲೂಕು ಯೋಜನಾಧಿಕಾರಿಗಳಾದ ಸುನೀತಾ ಪ್ರಭು ಅವರು ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಹಾಲು ಮತ್ತು ಹಣ್ಣುಗಳನ್ನು ವಿತರಿಸಿ ಮಾನವೀಯತೆ ಮೆರೆದರು. ಇಂತಹ ಸೇವಾ ಕಾರ್ಯಗಳು ಸಮಾಜದಲ್ಲಿ ಸಹಾನುಭೂತಿ ಹಾಗೂ ಪರಸ್ಪರ ಸಹಕಾರವನ್ನು ಹೆಚ್ಚಿಸುತ್ತವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾನ್ವಿ ವಲಯದ ಮೇಲ್ವಿಚಾರಕರಾದ ಮೈಲಾರಿ, ಕಚೇರಿ ಸಿಬ್ಬಂದಿಗಳಾದ ಬಸವಲಿಂಗಪ್ಪ, ಜ್ಞಾನವಿಕಾಸ ಸಮನ್ವಯಾಧಿಕಾರಿ ಜ್ಯೋತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಖ್ಯಾತ ಮಕ್ಕಳ ತಜ್ಞ ಡಾ.ದೊಡ್ಡಬಸವ

ನೈಜ್ಯ ದೆಸೆ ನ್ಯೂಸ್





**ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು ವತಿಯಿಂದ ಪ್ರತೀ ಶನಿವಾರದಂತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ದಿನಾಂಕ ಏಪ್ರಿಲ್ 4 ರ ಶನಿವಾರದಂದು ಆಯೋಜಿಸಲಾಯಿತು.ಈ ಕಾರ್ಯಕ್ರಮಕ್ಕೆ ಬಸವ ಮಕ್ಕಳ ಆಸ್ಪತ್ರೆ, ಸಿಂಧನೂ- ರಿನ ಖ್ಯಾತ ಮಕ್ಕಳ ತಜ್ಞರಾದ ಡಾ. ದೊಡ್ಡ ಬಸವ (MBBS, MD Pediatrics) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಸಮಾಲೋಚನೆ ಹಾಗೂ ಪ್ರೇರಣಾತ್ಮಕ ಉಪನ್ಯಾಸ ನೀಡಿದರು.**

ತಮ್ಮ ಉಪನ್ಯಾಸದಲ್ಲಿ ಅವರು "ಮಾನಸಿಕ ಆರೋಗ್ಯವು ಪ್ರತಿಯೊಬ್ಬರ ಜೀವನದ ಪ್ರಮುಖ ಅಂಶವಾಗಿದ್ದು, ಒಬ್ಬ ಆರೋಗ್ಯ ವೃತ್ತಿಪರನಿಗೆ ಆತ್ಮವಿಶ್ವಾಸ, ಸಹಾನುಭೂತಿ ಮತ್ತು ಸೇವಾಭಾವನೆ ಅತ್ಯಂತ ಅಗತ್ಯ. ನೀವು ಕಲಿಯುತ್ತಿರುವ ವಿದ್ಯೆ ಕೇವಲ ಉದ್ಯೋಗಕ್ಕಾಗಿ ಮಾತ್ರವಲ್ಲ, ಸಮಾಜ ಸೇವೆಗಾಗಿ ಎಂಬ ಮನೋಭಾವದಿಂದ ಮುಂದೆ ಸಾಗಬೇಕು" ಎಂದು ಹೇಳಿದರು.ಇದೇ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳಿಗೆ "ನೀವು ಮುಂದಿನ ದಿನಗಳಲ್ಲಿ ಡಿ ಫಾರ್ಮಸಿ ಆಫೀಸರ್, ನರ್ಸಿಂಗ್ ಆಫೀಸರ್ ಹಾಗೂ ಪ್ಯಾರಾ ಮೆಡಿಕಲ್ ಆಫೀಸರ್‌ಗಳಾಗಿ ಸಮಾಜದಲ್ಲಿ ಗೌರವವನ್ನು ಪಡೆಯುವವರು.

ಆದ್ದರಿಂದ ನೀವು ನಿಮ್ಮ ವೃತ್ತಿಯಲ್ಲಿ ನಿಷ್ಠೆ, ಶಿಸ್ತು ಮತ್ತು ಮಾನವೀಯತೆಯನ್ನು ಅಳವಡಿಸಿಕೊಳ್ಳಬೇಕು.ರೋಗಿಗಳಿಗೆ ಕೇವಲ ಚಿಕಿತ್ಸೆ ನೀಡುವುದಷ್ಟೇ ಅಲ್ಲ, ಅವರಿಗೆ ಧೈರ್ಯ, ಆಶೆ ಮತ್ತು ಆರೈಕೆ ನೀಡುವ ಜವಾಬ್ದಾರಿ ನಿಮ್ಮದು" ಎಂದು ಮಾರ್ಗದರ್ಶನ ನೀಡಿದರು. ಹಾಗೂ "ಒಬ್ಬ ಉತ್ತಮ ನರ್ಸ್ ಅಥವಾ ವೈದ್ಯಕೀಯ ಸಿಬ್ಬಂದಿ ರೋಗಿಗಳ ಜೀವನದಲ್ಲಿ ಬದಲಾವಣೆ ತರಬಲ್ಲ ಶಕ್ತಿ ಹೊಂದಿರುತ್ತಾರೆ. ನಿಮ್ಮ ಕೆಲಸದ ಮೂಲಕ ಸಮಾಜದಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಬೆಳೆಸಬೇಕು" ಎಂದು ಹೇಳಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸನ್ ರೈಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ ಅವರು, ಸಂಸ್ಥೆಯ ಅಧ್ಯಕ್ಷರ ಪರವಾಗಿ, ಎಲ್ಲಾ ಉಪನ್ಯಾಸಕರ ಪರವಾಗಿ ಹಾಗೂ ವಿದ್ಯಾರ್ಥಿಗಳ ಪರವಾಗಿ ಡಾ. ದೊಡ್ಡ ಬಸವ ಸರ್ ಅವರಿಗೆ ತುಂಬು ಹೃದಯದ ಧನ್ಯವಾದಗಳು ಸಲ್ಲಿಸಿದರು.





ಅವರ ಸೇವಾಭಾವನೆ, ಸಿಂಧನೂರಿನ ಮಕ್ಕಳ ವೈದ್ಯಕೀಯ ಕ್ಷೇತ್ರದಲ್ಲಿನ ಅನುಭವ ಹಾಗೂ ಬಡವರ ಕಾಳಜಿ ಮತ್ತು ಬಿಡುವಿಲ್ಲದ ಸಮಯದಲ್ಲೂ ನಮ್ಮ ಸನ್ ರೈಸ್ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ಹೊಂದಿರುವ ಕಾಳಜಿಯನ್ನು ಪ್ರಶಂಸಿಸಿ, ಇಂತಹ ಉಪನ್ಯಾಸಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಅತ್ಯಂತ ಸಹಾಯಕವಾಗುತ್ತವೆ ಎಂದು ಹೇಳಿದರು.ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವ ಜೊತೆಗೆ ಅವರ ವೃತ್ತಿ ಜೀವನದ ಬಗ್ಗೆ ಸ್ಪಷ್ಟತೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಿದ ಮಹತ್ವದ ಕಾರ್ಯಕ್ರಮವಾಗಿ ನೆರವೇರಿತು. ಈ ಸಂಧರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ ಹಾಗೂ ಆಸಿಫ್ ಉಪನ್ಯಾಸಕರಾದ ರಾಜೇಶ್, ಅಶು ಪಾಷಾ,ಸಂತೋಷಿ,ವೀರೇಶ್, ಸುಧಾ,ಶೋಭಾ ,ಸುರೇಶ್ ಯಾದವ್ ಹಾಗೂ ಎಲ್ಲಾ ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಶನಿವಾರದ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಬಾಬು ಜಗಜೀವನ್ ರಾವ್

ಸಮತೆಯ ಸೂರ್ಯನು ಉದಯಿಸಿದ ದಿನ,
ಸಾಮಾನ್ಯರ ಹೃದಯದಲ್ಲಿ ಮೂಡಿದ ಚಿನ್ನ;
ಅಸ್ಪೃಶ್ಯತೆಗೆ ಅಡ್ಡಬಂದ ಧೈರ್ಯಸ್ವರ,
ಅವರೇ ಬಾಬು ಜಗಜೀವನ್ ರಾವ್ ಮಹನೀಯರ.

ಬಡವರ ಬಾಳಿಗೆ ಬೆಳಕಾದ ನಾಯಕ,
ನ್ಯಾಯದ ಹಾದಿಯಲ್ಲಿ ನಡೆದ ಮಹಾಯೋಗಿ;
ಸಮಾನ ಹಕ್ಕುಗಳಿಗಾಗಿ ಹೋರಿದ ಹೃದಯ,
ಜನಮನದಲ್ಲಿ ಉಳಿದ ಶಾಶ್ವತ ಸ್ಮಾರಕ.

ಸ್ವಾತಂತ್ರ್ಯ ಹೋರಾಟದ ಧೀರ ಸೈನಿಕ,
ಸಂವಿಧಾನದ ಮೌಲ್ಯಗಳ ನಿಜವಾದ ರಕ್ಷಕ;
ಜಾತಿ ಬೇಧದ ಗೋಡೆಗಳನ್ನು ಒಡೆದವರು,
ಮಾನವೀಯತೆಯ ಸಂದೇಶ ಹಂಚಿದವರು.

ಸೇವೆಯೇ ಧರ್ಮವೆಂದು ಬದುಕಿದ ಮಹನುಭಾವ,
ಭಾರತದ ಗೌರವ ? ಬಾಬು ಜಗಜೀವನ್ ರಾವ್;
ಅವರ ಆದರ್ಶ ದಾರಿ ಬೆಳಗಲಿ ಸದಾ,
ಸಮತೆ-ಸೌಹಾರ್ದದ ಭಾರತ ಕಟ್ಟೋಣ ನಾವು ಎಲ್ಲರು ಸೇರಿ

ಮರಿಯಪ್ಪ

## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಅಕ್ಷೇಪಣೆಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಶಿಶು ಅಭಿವೃದ್ಧಿ ಯೋಜನೆ ರಾಯಚೂರು ವ್ಯಾಪ್ತಿಯಲ್ಲಿ 2025-26ನೇ ಸಾಲಿಗೆ ಅಂಗನವಾಡಿ ಕಾರ್ಯಕರ್ತೆ 01, ಸಹಾಯಕಿಯರು 17 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಈಗಾಗಲೇ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**



ತಾತ್ಕಾಲಿಕವಾಗಿ ಆಯ್ಕೆ ಮಾಡಿರುವುದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 13-04-2026ರೊಳಗಾಗಿ ಸಮಯ ಬೆಳಿಗ್ಗೆ ಬೆಳಿಗ್ಗೆ 08 ಗಂಟೆಯಿಂದ ಮಧ್ಯಾಹ್ನ 01.30ರವರೆಗೆ ಸಲ್ಲಿಸಬಹುದಾಗಿದೆ. ಅಕ್ಷೇಪಣೆ ಸಲ್ಲಿಸುವವರು ಅಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂತಹವರ ಅಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರನ್ನು ಸಂಪರ್ಕಿಸುವಂತೆ ಶಿಶು ಅಭಿವೃಧ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯಾಧ್ಯಕ್ಷರಾಗಿ ನಾಗರಾಜ ಚಿಗರಿ ನೇಮಕ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಅಖಿಲ ಭಾರತೀಯ ಶ್ರೀಭಗವಾನ್ ವಾಲ್ಮೀಕಿ ಕರ್ನಾಟಕ ಸಂಘದ ರಾಜ್ಯಾಧ್ಯಕ್ಷರನ್ನಾಗಿ ನಾಗರಾಜ ಚಿಗರಿಯನ್ನು ನೇಮಿಸಿ ರಾಷ್ಟ್ರೀಯ ಅಧ್ಯಕ್ಷರಾದ ಮಹಾಮಂಡಲೇಶ್ವರ ವಿವೇಕನಾಥ ಆದೇಶ ಹೊರಡಿಸಿದ್ದಾರೆ.**



ಮುಂದಿನ ದಿನಗಳಲ್ಲಿ ಕರ್ನಾಟಕನಾದ್ಯಂತ ಓಡಾಡಿ ಪ್ರತಿ ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ಅಖಿಲ ಭಾರತೀಯ ಶ್ರೀಭಗವಾನ್ ವಾಲ್ಮೀಕಿ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ನೇಮಕ ಮಾಡುವ ಮೂಲಕ ಸಂಘವನ್ನು ಬಲಪಡಿಸಬೇಕೆಂದು ಆದೇಶ ಹೊರಡಿಸಿದ್ದಾರೆ.

## ಮಾನವ ಧರ್ಮದ ಮಾನವೀಯತೆಯ ಕಾರುಣ್ಯ ಆಶ್ರಮದ ಸೇವೆ ಅಭಿನಂದನಾರ್ಹವಾದದ್ದು :ಮಹಮ್ಮದ್ ಕುಂಞ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಂಗಳೂರಿನ ಶಾಂತಿ ಪ್ರಕಾಶನ ವ್ಯವಸ್ಥಾಪಕರು ಹಾಗೂ ಕನ್ನಡ ಖುರಾನ್ ನ ಖ್ಯಾತ ಪ್ರವಚನಕಾರರಾದ ಮಹಮ್ಮದ್ ಕುಂಞ ಅವರು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಮದ ಎಲ್ಲಾ ವೃದ್ಧರ ಯೋಗ ಕ್ಷೇಮವನ್ನು ವಿಚಾರಿಸಿ ಹಣ್ಣು ಹಂಪಲುಗಳನ್ನು ವಿತರಿಸಿ ಆಶ್ರಯದಾತರುಗಳಿಗೆ ಆತ್ಮಸ್ಥೈರ್ಯ ತುಂಬಿದರು.**

ಈ ಸಮಯದಲ್ಲಿ ಆಶ್ರಮದ ವತಿಯಿಂದ ಮಹಮ್ಮದ್ ಕುಂಞ ಅವರನ್ನು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು. ನಂತರ ಖ್ಯಾತ ಪ್ರವಚನಕಾರರಾದ ಮಹಮ್ಮದ್ ಕುಂಞ ಮಾತನಾಡಿ ಎಲ್ಲಾ ಧರ್ಮಗಳಲ್ಲಿಯೂ ಹೆತ್ತವರನ್ನು ನೊಂದವರನ್ನು ಅನಾಥರನ್ನು ಪ್ರೀತಿಸಬೇಕು ಎನ್ನುವ ಸಂದೇಶಗಳು ಇರುತ್ತವೆ.




ಪ್ರವಾದಿಯವರು ಖುರಾನ್ ನಲ್ಲಿ ತಾಯಿಯ ಪಾದದ ಕೆಳಗಡೆ ಸ್ವರ್ಗವಿದೆ ಎಂದು ಹೇಳುತ್ತಾರೆ. ಆದರೆ ಇಂದು ಕಾರುಣ್ಯ ಆಶ್ರಮದಲ್ಲಿ ನಾನು ಅದೆಷ್ಟೋ ತಂದೆ ತಾಯಿಗಳನ್ನು ನೋಡಿ ಅವರ ಬಗ್ಗೆ ತಿಳಿದು ಕೊಂಡಾಗ ಬಹಳ ದುಃಖವಾಯಿತು. ಇಂಥವರ ಬದುಕಿಗಾಗಿ ಹುಟ್ಟಿಕೊಂಡಿರುವ ಈ ಕಾರುಣ್ಯ ಕುಟುಂಬ ಮಾನವ ಧರ್ಮದ ಧರ್ಮ ಕೇಂದ್ರವಾಗಿದೆ. ಮಾನವ ಧರ್ಮದ ಮಾನವೀಯತೆಯ ಕಾರುಣ್ಯ ಆಶ್ರಮದ ಸೇವೆ ಅಭಿನಂದನಾರ್ಹವಾದದ್ದು. ಇಂತಹ ಸೇವೆಗೆ ಪ್ರತಿಯೊಬ್ಬರೂ ಕೂಡ ಸಹಾಯ ಸಹಕಾರ ಮಾಡಿದಾಗ ಮಾತ್ರ ತಮ್ಮೆಲ್ಲರ ಬದುಕು ಸಾರ್ಥಕವಾಗುತ್ತದೆ. ಪ್ರವಾದಿಯವರ ಆಶಯದಂತೆ ಕಾರುಣ್ಯ ಕುಟುಂಬದ ಸೇವೆ ಜರುಗುತ್ತಿದೆ. ಇಂತಹ ಒಂದು ಪುಣ್ಯಕ್ಷೇತ್ರದಲ್ಲಿನ ಆಶ್ರಯದಾತ ನಿಜ ದೇವರುಗಳ ದರ್ಶನ ನನಗಾಗಿದ್ದು ನನ್ನ ಪೂರ್ವ ಜನ್ಮದ ಪುಣ್ಯ ಮುಂದಿನ ದಿನಮಾನಗಳಲ್ಲಿ ನಾನು ಸಿಂಧನೂರಿಗೆ ಬಂದಾಗ ಖಂಡಿತವಾಗಿ ಬರುತ್ತಿರುತ್ತೇನೆ ಎಂದು ಮಾತನಾಡಿ ಆಶ್ರಮದ ಸೇವಾಕರ್ತ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಟಿ.ಹುಸೇನ್ ಸಾಬ್ ಅಧ್ಯಕ್ಷರು ಜಮಾಅತೆ ಇಸ್ಲಾಮಿ ಹಿಂದ್ ಸಿಂಧನೂರು.

ಅಬುಲೇಶ್ ನಾಯಕ್ ಅಧ್ಯಕ್ಷರು ಸೋಲಿದಾರಿಟಿ ಯೂಥ್ ಮೂವ್ ಮೆಂಟ್ ಸಿಂಧನೂರು. ತಮೀಮ್ ಇಸ್ಲಾಂ. ಮಹಮ್ಮದ್ ಉಮೇರ್. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಮೀನಾಕ್ಷಮ್ಮ. ಲಕ್ಷ್ಮಿ ಅನೇಕರು ಉಪಸ್ಥಿ ತರಿದ್ದರು.

## ಆರ್‌ಸೇಟಿನಿಂದ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಂ-ಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯು 2026ರ ಏಪ್ರಿಲ್ 10ರಿಂದ**



**ಪ್ರಾರಂಭವಾಗಿ 35ದಿನಗಳ ಕಾಲ ನಡೆಯಲಿದೆ.** ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 10 ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್-ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸ್ನೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್ ಬಡಿಗೇರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವರ್ಗಾವಣೆಗೊಂಡ ಬಳಗಾನೂರು ಪಟ್ಟಣ ಪಂಚಾಯ್ತಿ ಆರೋಗ್ಯ ನಿರೀಕ್ಷಕ ಆರ್,ಎನ್,ಯಾದವ್ ಗೆ ಪೌರಕಾರ್ಮಿಕರಿಂದ ಹೃದಯಸ್ಪರ್ಶೀ ಬೀಳ್ಕೊಡುಗೆ



ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಸರ್ಕಾರಿ ಕಚೇ-ರಿಗಳಲ್ಲಿ ಸಾಮಾನ್ಯವಾಗಿ ಕಡತಗಳು ಮಾತ್ರ ಮಾತಾಡುತ್ತವೆ,ಆದರೆ ಇಲ್ಲಿ ಮನಸ್ಸುಗಳು ಮಾತಾಡಿದವು. ಬಳಗಾನೂರಿನ ಪಟ್ಟಣ ಪಂಚಾಯ್ತಿಯಲ್ಲಿ **ಕಳೆದ ನಾಲ್ಕು ವರ್ಷಗಳಿಂದ ಕಿರಿಯ ಆರೋಗ್ಯ ನಿರೀಕ್ಷಕರಾಗಿ ಸೇವೆ ಸಲ್ಲಿಸಿದ್ದ ರಾಮ್ ನರೇಶ ಯಾದವ್ ಅವರು ಈಗ ಹಿರಿಯ ಆರೋಗ್ಯ ನಿರೀಕ್ಷಕರಾಗಿ ಪದೋನ್ನತಿ ಹೊಂದಿ ಮಾನವಿ ಪಟ್ಟಣಕ್ಕೆ ವರ್ಗಾವಣೆಗೊಂಡಿದ್ದಾರೆ.**

ಈ ವರ್ಗಾವಣೆ ಒಂದು ಸಾಮಾನ್ಯ ಆಡಳಿತಕ್ರಮವಾಗಿರಬಹುದಿತ್ತು.ಆದರೆ ಇಲ್ಲಿ ಅದು ಭಾವನೆಗಳಪ್ರವಾಹವಾಯಿತು.ಪೌರಕಾರ್ಮಿಕರು, ಸಮುದಾಯ ಸಂಚಾಲಕರು,ಯಾದವ್ ಅವರಿಗೆ ಬೆಳ್ಳಿಯ ಕಡಗ ನೀಡಿ ಗೌರವಿಸಲಾಯಿತು.ಆದ-'ರೆ ಆ ಕಡಗಕ್ಕಿಂತ ಬೆಲೆಬಾಳಿದ್ದು ಅವರ ಮೇಲೆ ಕಾರ್ಮಿಕರ ಪ್ರೀತಿ.ಕೆಲವರು ಗದ್ಗದಿತರಾದರು, ಕೆಲವರಿಂದ ಕಣ್ಣೀರನ್ನು ಅಡಗಿಸಲಾಗಲಿಲ್ಲ, ಹಲವರು ಅಳುತ್ತಲೇ ಅವರನ್ನು ಬೀಳ್ಕೊಟ್ಟರು. ಪದೋನ್ನತಿಯ ಸಂತೋಷ ಒಂದೆಡೆ ಇದ್ದರೆ, ನಮ್ಮವರನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ನೋವು ಮತ್ತೊಂದೆಡೆ. ಈ ಕ್ಷಣವು ಒಂದೇ ಸಂದೇಶ ನೀಡಿತು. ಅಧಿಕಾರದಲ್ಲಿ ಮಾನವೀಯತೆ ಇದ್ದರೆ, ಸಂಬಂಧಗಳು ಕೇವಲ ಕಚೇ-ರಿಯಲ್ಲೇ ಅಲ್ಲ, ಹೃದಯದಲ್ಲೂ ಕಟ್ಟಿಕೊಳ್ಳುತ್ತವೆ.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯ್ತಿಯ ಅಧ್ಯಕ್ಷ ಶಿವಕುಮಾರ ನಾಯಕ, ಮುಖ್ಯಾಧಿಕಾರಿ ಹಾಗೂಸಿಬ್ಬಂಧಿವರ್ಗದವರು ಉಪಸ್ಥಿತರಿದ್ದರು. ಇಂದಿನ ಯುಗದಲ್ಲಿ ವೇದಿಕೆಯ ಮೇಲೆ ಗೌರವ ನೀಡಿನಂತರಅವಮಾನಿಸುವವರನಡುವೆ,ರಾಮ್ ನರೇಶ ಯಾದವ್ ಅವರು ಮನುಷ್ಯತ್ವದ ಮಾದರಿ ಯಾಗಿ ಹೊರಹೊಮ್ಮಿದ್ದಾರೆ.

ವರದಿ: ಸುರೇಶ ಬಳಗಾನೂರು

## ದಾವಣಗೆರೆ ದಕ್ಷಿಣ ಉಪ ಚುನಾವಣೆ: ಶಾಸಕ ಆರ್. ಬಸನಗೌಡ ತುರ್ವಿಹಾಳ ಅವರಿಂದ ಸಮರ್ಥ ಪರ ಪ್ರಚಾರ

ನೈಜ್ಯ ದೆಸೆ ನ್ಯೂಸ್

**ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಯ ಅಂಗವಾಗಿ ಕಾಂಗ್ರೆಸ್ ಪಕ್ಷದ ಪರವಾಗಿ ನಗರದಲ್ಲಿ ಬಿರುಸಿನ ಪ್ರಚಾರ ಕಾರ್ಯಕ್ರಮಗಳು ನಡೆದವು. ನಗರದ ವಿವಿಧ ಬಡಾವಣೆಗಳಲ್ಲಿ ನಡೆದ ಪ್ರಚಾರ ಸಭೆಗಳಲ್ಲಿ ಪ್ರಮುಖ ನಾಯಕರು ಭಾಗವಹಿಸಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಅವರ ಪರವಾಗಿ ಮತಯಾಚನೆ ನಡೆಸಿದರು.**

ಮಸ್ಕಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಆರ್. ಬಸನಗೌಡ ತುರ್ವಿಹಾಳ ಅವರು ಪ್ರಚಾರ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಸಾಧನೆಗಳು ಹಾಗೂ ಜನಪರ ಯೋಜನೆಗಳ ಬಗ್ಗೆ ವಿವರಿಸಿದರು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಸಾಮಾನ್ಯ ಜನರ ಬದುಕಿಗೆ ಆಶಾಕಿರಣವಾಗಿದ್ದು,



ಬಡವರು, ಮಹಿಳೆಯರು ಹಾಗೂ ಯುವಕರ ಅಭಿವೃದ್ಧಿಗೆ ಬಹುಮುಖ್ಯವಾಗಿದೆ ಎಂದು ಅವರು ಹೇಳಿದರು.ಅವರು ಮುಂದುವರಿಸಿ, "ಕಾಂಗ್ರೆಸ್ ಪಕ್ಷವು ಸದಾ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಪಕ್ಷವಾಗಿದ್ದು, ಅಭಿವೃದ್ಧಿ ಮತ್ತು ಕಲ್ಯಾಣಕ್ಕೆ ಆದ್ಯತೆ ನೀಡುತ್ತಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಅಭಿವೃದ್ಧಿಗಾಗಿ ಸಮರ್ಥ ಶಾಮನೂರು ಅವರನ್ನು ಭರ್ಜರಿ ಬಹುಮತದಿಂದ ಗೆಲ್ಲಿಸಬೇಕು" ಎಂದು ಮನವಿ ಮಾಡಿದರು.

ಇದೇ ವೇಳೆ ರಾಯಚೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಅವರು ಸಹ ಪ್ರಚಾರದಲ್ಲಿ ಭಾಗವಹಿಸಿ ಮಾತನಾಡಿ, ರಾಜ್ಯ ಸರ್ಕಾರದ ವಿವಿಧ ಜನಪರ ಯೋಜನೆಗಳು, ಗ್ಯಾರಂಟಿಗಳು ಹಾಗೂ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಕಾಂಗ್ರೆಸ್ ಸರ್ಕಾರದ ಕಾರ್ಯಪದ್ಧತಿ ಜನಮೆಚ್ಚುಗೆ ಗಳಿಸಿರುವುದರಿಂದ ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಭಾರಿ ಬೆಂಬಲ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ದಾವಣಗೆರೆ ಲೋಕಸಭಾ ಸದಸ್ಯೆಯಾದ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ, ನಿರುಪಾದಪ್ಪ ವಕೀಲರು, ಶಂಕರಗೌಡ ಉಮಲೂಟಿ ಸೇ-ರಿದಂತೆ ಹಲವಾರು ಕಾಂಗ್ರೆಸ್ ನಾಯಕರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.ನಗರದ ವಿವಿಧ ಭಾಗಗಳಲ್ಲಿ ನಡೆದ ಈ ಪ್ರಚಾರ ಸಭೆಗಳು ಜನರಿಂದ ಉತ್ತಮ ಪ್ರತಿಕ್ರಿಯೆ ಪಡೆದಿದ್ದು, ಕಾಂಗ್ರೆಸ್ ಪಕ್ಷದ ಪರ ಹಿತಕರ ವಾತಾವರಣ ನಿರ್ಮಾಣವಾಗುತ್ತಿರುವುದು ಸ್ಪಷ್ಟವಾಗಿ ಗೋಚರಿಸಿತು.


## APAAR ಜಾರಿಗೆ ಸ್ವಯಂಪ್ರೇರಿತ, ಸಮಾವೇಶಾತ್ಮಕ ವಿಧಾನ ಅಗತ್ಯ: ಸಂಸದ ಕುಮಾರ್ ನಾಯಕ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ್ ನಾಯಕ್ ಅವರು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ (ABC) ಹಾಗೂ ಸ್ವಯಂಚಾಲಿತ ಶಾಶ್ವತ ಶೈಕ್ಷಣಿಕ ಖಾತೆ ನೋಂದಣಿ ವ್ಯವಸ್ಥೆ (APAAR) ಜಾರಿಗೆ ಸಂಬಂಧಿಸಿದಂತೆ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ನಡುವೆ, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ APAAR ಯೋಜನೆ ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿದ್ದು, ಮಾಹಿತಿ ಹೊಂದಿದ ಅನುಮತಿಯ ಆಧಾರದ ಮೇಲೆ ನಡೆಯುತ್ತದೆ ಎಂದು ಸ್ಪಷ್ಟಪಡಿಸಿದೆ.**

ಗುರುವಾರ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ, ನೀತಿಯ ಉದ್ದೇಶ ಮತ್ತು ನೆಲಮಟ್ಟದ ಸಿದ್ಧತೆಗಳ ನಡುವೆ ವ್ಯತ್ಯಾಸ ಕಂಡುಬರುತ್ತಿದೆ ಎಂದು ಕುಮಾರ್ ನಾಯಕ್ ಹೇಳಿದ್ದಾರೆ. ವಿಶೇಷವಾಗಿ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (CBSE) ನೀಡಿರುವ ಇತ್ತೀಚಿನ ನಿರ್ದೇಶನಗಳ ಹಿನ್ನೆಲೆಯಲ್ಲಿ ಈ ಚಿಂತೆ ವ್ಯಕ್ತವಾಗಿದೆ. ಲೋಕಸಭೆಯಲ್ಲಿ ಕುಮಾರ್ ನಾಯಕ್ ಕೇಳಿದ ಲಿಖಿತ ಪ್ರಶ್ನೆಗೆ ಶಿಕ್ಷಣ ಸಚಿವಾಲಯ ಉತ್ತರ ನೀಡಿದ್ದು, APAAR ID ಸೃಷ್ಟಿ ಸಂಪೂರ್ಣವಾಗಿ ಸ್ವಯಂಪ್ರೇ-ರಿತವಾಗಿದ್ದು, ವಿದ್ಯಾರ್ಥಿ ಅಥವಾ ಪೋಷಕರ ಸ್ಪಷ್ಟ ಅನುಮತಿ ಅಗತ್ಯವಿದೆ ಎಂದು ತಿಳಿಸಿದೆ. ಂಕಂಂಖ ಖಆ ಇಲ್ಲದ ಕಾರಣಕ್ಕೆ ಯಾವುದೇ ವಿದ್ಯಾರ್ಥಿಗೆ ಮಂಡಳಿ ಪರೀಕ್ಷೆಗೆ ಹಾಜರಾಗಲು ತಡೆ ಇರುವುದಿಲ್ಲ ಎಂದೂ ಸಚಿವಾಲಯ ಸ್ಪಷ್ಟಪಡಿಸಿದೆ. ಆದರೆ, 2026-27 ಶೈಕ್ಷಣಿಕ ವರ್ಷದಿಂದ 9 ಮತ್ತು 11ನೇ ತರಗತಿ ನೋಂದಣಿಗೆ 12 ಅಂಕೆಯ ಂಕಂಂಖ ಖಆ ಕಡ್ಡಾಯಗೊಳಿಸುವುದಾಗಿ CBSE ನಿರ್ಧರಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಆತಂಕ ಮೂಡಿಸಿದೆ ಎಂದು ನಾಯಕ್ ಹೇಳಿದ್ದಾರೆ.

"ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಸುಗಮವಾಗಿ ಮತ್ತು ಎಲ್ಲೆಡೆ ಬಳಸಬಹುದಾದ



ವ್ಯವಸ್ಥೆ ರೂಪಿಸುವ ಉದ್ದೇಶ ಮಹತ್ವದ್ದೇ. ಆದರೆ ಅದರ ಜಾರಿ ಪಾರದರ್ಶಕವಾಗಿಯೂ ಸಮಾವೇಶಾತ್ಮಕವಾಗಿಯೂ ಇರಬೇಕು. APAAR ಸ್ವಯಂಪ್ರೇರಿತ ಎಂಬುದನ್ನು ಪೋಷಕರಿಗೆ ಸ್ಪಷ್ಟವಾಗಿ ತಿಳಿಸಬೇಕು. ತಾಂತ್ರಿಕ ಅಥವಾ ಆಡಳಿತಾತ್ಮಕ ಸಮಸ್ಯೆಗಳ ಕಾರಣದಿಂದ ಯಾವುದೇ ವಿದ್ಯಾರ್ಥಿ ಅನ್ಯಾಯಕ್ಕೆ ಒಳಗಾಗಬಾರದು," ಎಂದು ಅವರು ಹೇಳಿದರು. ಸುಮಾರು 4.5 ಕೋಟಿ ವಿದ್ಯಾರ್ಥಿಗಳಲ್ಲಿ ಸುಮಾರು 40% ಮಂದಿ ಇನ್ನೂ APAAR ವ್ಯವಸ್ಥೆಯಲ್ಲಿ ನೋಂದಾಯಿತರಾಗಿಲ್ಲ ಎಂಬ ವರದಿಗಳನ್ನು ಉಲ್ಲೇಖಿಸಿದ ಅವರು, ಶಾಲೆಗಳು ಪೋಷಕರಲ್ಲಿ ಸಮರ್ಪಕ ಅರಿವು ಮೂಡಿಸದೆ ನೋಂದಣಿ ಪ್ರಕ್ರಿಯೆಯನ್ನು ಮುನ್ನಡೆಸುತ್ತಿರುವುದಾಗಿ ಹೇಳಿದರು.

ಶಿಕ್ಷಣ ಸಚಿವಾಲಯವೂ ತನ್ನ ಉತ್ತರದಲ್ಲಿ UDISE+ ಮತ್ತು ಆಧಾರ್ ಮಾಹಿತಿಗಳಲ್ಲಿನ ವ್ಯತ್ಯಾಸದಂತಹ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಕೆಲವು ವಿದ್ಯಾರ್ಥಿಗಳಿಗೆ APAAR ID ದೊರಕದೆ ಇರುವುದನ್ನು ಒಪ್ಪಿಕೊಂಡಿದ್ದು, ರಾಜ್ಯಗಳು ಹಾಗೂ ಶಾಲೆಗಳು ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ. ಈ ರೀತಿಯ ಸಮಸ್ಯೆಗಳು ವಿದ್ಯಾರ್ಥಿಗಳ ಹೊರತುಪಡಿಸುವಿಕೆ ಹಾಗೂ ಕುಟುಂಬಗಳ ಮೇಲೆ ಹೆಚ್ಚುವರಿ ಆಡಳಿತಾತ್ಮಕ ಒತ್ತಡಕ್ಕೆ ಕಾರಣವಾಗಬಹುದು ಎಂದು ಕುಮಾರ್ ನಾಯಕ್ ಅಭಿಪ್ರಾಯಪಟ್ಟರು. "ದತ್ತಾಂಶ ರಕ್ಷಣೆಗಾಗಿ ಬಲವಾದ ಭದ್ರತಾ ಕ್ರಮಗಳು ಹಾಗೂ ತಾಂತ್ರಿಕ ಸಮಸ್ಯೆಗಳಿಗೆ ತ್ವ-ರಿತ ಪರಿಹಾರ ವ್ಯವಸ್ಥೆ ಅಗತ್ಯ. ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ಕ್ರಮವಹಿಸಬೇಕು," ಎಂದು ಅವರು ಹೇಳಿದರು. ಪೋಷಕರು ಮತ್ತು ಶಾಲೆಗಳೊಂದಿಗೆ ಉತ್ತಮ ಸಂವಹನ ನಡೆಸಿ, ಜಾರಿಗೆ ಸಂಬಂಧಿಸಿದ ಕೊರತೆಗಳನ್ನು ಸರಿಪಡಿಸಿದ ಬಳಿಕವೇ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಬೇಕು ಎಂದು ಅವರು ಕೇಂದ್ರ ಸರ್ಕಾರವನ್ನು ಮನವಿ ಮಾಡಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿ (NEP) 2020 ಅಡಿಯಲ್ಲಿ ಪರಿಚಯಿಸಲಾದ APAAR ಯೋಜನೆಯ ಉದ್ದೇಶ ವಿದ್ಯಾರ್ಥಿಗಳಿಗೆ ಜೀವನಪೂರ್ತಿ ಶೈಕ್ಷಣಿಕ ಗುರುತು ಒದಗಿಸಿ, ಕ್ರೆಡಿಟ್ ವರ್ಗಾವಣೆ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳ ನಡುವೆ ಶೈಕ್ಷಣಿಕ ಪ್ರಗತಿಯನ್ನು ಸುಗಮವಾಗಿ ಟ್ರ್ಯಾಕ್ ಮಾಡುವುದಾಗಿದೆ.

# ನೇಮಕಾತಿ ಪ್ರಕಟಣೆ

DHFWS ಉತ್ತರ ಕನ್ನಡ ನೇಮಕಾತಿ 2026–12 ತಜ್ಞ ವೈದ್ಯ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 4, 2026 DHFWS ಉತ್ತರ ಕನ್ನಡ ನೇಮಕಾತಿ 2026: 12 ತಜ್ಞ ವೈದ್ಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಉತ್ತರ ಕನ್ನಡ ಆಊಊಈಫಖ ಉತ್ತರ ಕನ್ನಡ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ಮೂಲಕ ತಜ್ಞ ವೈದ್ಯ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉತ್ತರ ಕನ್ನಡ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಶೀಘ್ರದಲ್ಲೇ ನವೀಕರಿಸಲಾಗಿದೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01–04–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15/04/2026 ಅಧಿಕೃತ ವೆಬ್‌ಸೈಟ್: uttarakannada.nic.in

# ಬಜಾರ್ ರಸ್ತೆ ಮತ್ತು ಗಂಗಮ್ಮಗುಡಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗೆ ಕ್ರಮ: ಜಿಲ್ಲಾಧಿಕಾರಿ ಜಿ.ಪ್ರಭು

ನೈಜ್ಯ ದೆಸೆ ನ್ಯೂಸ್

**ಚಿಕ್ಕಬಳ್ಳಾಪುರ: ಜನರ ಹಿತದೃಷ್ಟಿಯಿಂದ, ವ್ಯಾಪಾರ ವಹಿವಾಟು ಹಾಗೂ ತುರ್ತು ಆರೋಗ್ಯದ ಪರಿಹಾರ ಕ್ರಮದ ದೃಷ್ಟಿಯಿಂದ ನಗರದ ಬಜಾರ್ ರಸ್ತೆ ಮತ್ತು ಗಂಗಮ್ಮಗುಡಿ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಸದ್ಯದಲ್ಲೇ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ತಿಳಿಸಿದರು.**

ಶನಿವಾರ ನಗರದ ಬಜಾರ್ ರಸ್ತೆ ಮತ್ತು ಗಂಗಮ್ಮಗುಡಿ ರಸ್ತೆಗೆ ಭೇಟಿ ನೀಡಿ ಅಲ್ಲಿನ ವ್ಯಾಪಾರಸ್ಥರು ಹಾಗೂ ನಿವಾಸಿಗಳ ಅಹವಾಲುಗಳನ್ನು ಸ್ವೀಕಾರ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಗಂಗಮ್ಮಗುಡಿ ರಸ್ತೆ ಮತ್ತು ಬಜಾರ್ ರಸ್ತೆಗಳ ಅಗಲೀಕರಣ ಮತ್ತು ಅಭಿವೃದ್ಧಿ ಚಟುವಟಿ–ಕೆಗಳನ್ನು ಕೈಗೊಳ್ಳಲು ಸರ್ಕಾರ ಈಗಾಗಲೇ




ಅನುದಾನವನ್ನು ಬಿಡುಗಡೆ ಮಾಡಿದೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಶಾಸಕರು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದ್ದಾರೆ. ಅನಧಿಕೃತವಾಗಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವ ನಿವಾಸಿಗಳು ಹಾಗೂ ವ್ಯಾಪಾರಸ್ಥರು ಸಹ ಒತ್ತುವರಿ ಜಾಗದ ತಮ್ಮ ಕಟ್ಟಡಗಳನ್ನು ಸ್ವಯಂ ಪ್ರೇರಿತರಾಗಿ ತೆರವುಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

ನಗರದ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಸುಗಮ ಸಂಚಾರದ ಹಿತದೃಷ್ಟಿಯಿಂದ ಈ ರಸ್ತೆಗಳ ಅಭಿವೃದ್ಧಿ ಕಾರ್ಯ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಈ ರಸ್ತೆಯ ಇಕ್ಕೆಲಗಳಲ್ಲಿನ ಎಲ್ಲ ಅಂಗಡಿ ಮಳಿಗೆಗಳ ಮಾಲೀಕರು, ವ್ಯಾಪಾರಸ್ಥರು, ನಿವಾಸಿಗಳು ಸಹಕಾರ ನೀಡುವಂತೆ ಕೋರಿದರು. ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಗೌ–ರಿಬಿದನೂರು ಮತ್ತು ಚಿಂತಾಮಣಿ ತಾಲ್ಲೂಕುಗಳನ್ನು ಸಂಪರ್ಕಿಸುವ ರಸ್ತೆಯನ್ನು ಈಗಾಗಲೇ ಅಗಲೀಕರಣ ಮಾಡಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಅದೇ ರೀತಿ ಬಜಾರ್ ರಸ್ತೆ ಮತ್ತು ಗಂಗಮ್ಮಗುಡಿ ರಸ್ತೆಗಳನ್ನು ಎಲ್ಲರ ಸಹಕಾರ ಪಡೆದು ಅಭಿವೃದ್ಧಿ ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ನಿರ್ದೇಶಕ ಮಂಜುನಾಥ್, ನಗರಸಭೆ ಪೌರಾಯುಕ್ತ ಮನ್ಸೂರ್ ಅಲಿ, ನಗರಸಭೆ ಸದಸ್ಯರು, ಸ್ಥಳೀಯ ವ್ಯಾಪಾರಸ್ಥರು ಹಾಗೂ ನಿವಾಸಿಗಳು ಹಾಜರಿದ್ದರು.

# ದೇವದುರ್ಗ ಪಟ್ಟಣದಲ್ಲಿ ಉಚಿತ ಸೈನಿಕರ ತರಬೇತಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಸೈನಿಕ ಅಕಾಡೆಮಿ ದೇವದುರ್ಗದಿಂದ ಅಗ್ನಿವೀರ, ಆರ್ಮಿ, ಪೋಲೀಸ್ ಹಾಗೂ ಪಿ.ಎಸ್.ಐ. ಹುದ್ದೆಗೆ ನೇಮಕ ಬಯಸುವ ಯುವಕರಿಗೆ ಉಚಿತ ತರಬೇತಿ ನೀಡುವ ಶಿಬಿರವನ್ನು ಆಯೋಜಿಸಲಾಗುತ್ತಿದೆ ಎಂದು ಸೈನಿಕ ಅಕಾಡೆಮಿಯ ಅಧ್ಯಕ್ಷ ಭಾನು ಪ್ರಕಾಶ ಖೇಣೇದ್ ತಿಳಿಸಿದರು.**





ಪಟ್ಟಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸೈನಿಕ ಅಕಾಡೆಮಿಯಿಂದ ದೇವದುರ್ಗದಲ್ಲಿ ಕಳೆದ 6 ವರ್ಷಗಳಿಂದ ಉಚಿತ ತರಬೇತಿ ನೀಡುತ್ತಿದ್ದು, ಸುಮಾರು 20 ಯುವಕರು ಸೈನಿಕರಾಗಿ ಆಯ್ಕೆಗೊಂಡಿದ್ದಾರೆ. ಸೈನಿಕರಾಗಲು ಬಯಸುವ ಯುವಕರಿಗೆ ಸರಕಾರಿ ಬಾಲಕಿಯರ ಪ್ರೌಢ ಶಾಲಾ ಆವರಣದಲ್ಲಿ (ಬಸ್ ನಿಲ್ದಾಣದ ಹತ್ತಿರ) ಏ.5 ರಂದು ದೈಹಿಕ ಮತ್ತು ಪ್ರವೇಶ (ಸಿ.ಇ.ಟಿ) ಪರೀಕ್ಷೆಗಳನ್ನು ನಡೆಸಿ ತರಬೇತಿಗೆ ಆಯ್ಕೆ ಮಾಡಲಾಗುವುದು ಎಂದು ಸೈನಿಕ ಅಕಾಡೆಮಿಯ ಅಧ್ಯಕ್ಷ ಭಾನುಪ್ರಕಾಶ ಖೇಣೇದ್ ತಿಳಿಸಿದರು. ಈ ಸಂದರ್ಭದಲ್ಲಿ ತರಬೇತಿದಾರ ಪಂಪಣ್ಣ ಅಕ್ಕರಕಿ, ಮಾರ್ಗದರ್ಶಕ ಡಾ.ಸುಭಾಷ್‌ಚಂದ್ರ ಪಾಟೀಲ್ ಇದ್ದರು.

# ಡಾ.ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕ ಆಡಳಿತದ ವತಿಯಿಂದ ಏಪ್ರಿಲ್ 14ರಂದು ಪಟ್ಟಣದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಆಚರಿಸಲಿದ್ದು ಅದರ ಪೂರ್ವಭಾವಿ ಸಭೆಯನ್ನು ಏಪ್ರಿಲ್ 7 ರಂದು ಸಂಜೆ 4 ಗಂಟೆಗೆ ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.**



ಸಭೆಯ ಅಧ್ಯಕ್ಷತೆಯನ್ನು ತಹಸಿಲ್ದಾರ್ ಡಾ.ವಿನಯಾ ಹೂಗಾರ ಅವರು ವಹಿಸಲಿದ್ದು ಸದರಿ ಸಭೆಯಲ್ಲಿ ಜಯಂತಿ ಯಶಸ್ವಿಯ ಸಿದ್ಧತೆಗಳ ಕುರಿತು ಚರ್ಚಿಸಲಾಗುವುದು. ಕಾರಣ ಪಟ್ಟಣದ ಗಣ್ಯರು, ಅಂಬೇಡ್ಕರ ಸಮಾಜದ ಪ್ರಮುಖರು, ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕೆಂದು ತಾಲೂಕ ಆಡಳಿತದ ಪ್ರಕಟಣೆ ತಿಳಿಸಿದೆ.

# ಬಾಗಲಕೋಟೆ ಉಪ ಚುನಾವಣೆ KRS ಪಕ್ಷದ ಅಭ್ಯರ್ಥಿ ಪ್ರಚಾರ ಜೋರು.



ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ ಉಪ ಚುನಾವಣೆಯ ಕರ್ನಾಟಕ ರಾಷ್ಟ್ರ ಸಮಿತಿ (KRS) ಪಕ್ಷದ ಅಭ್ಯರ್ಥಿಯ ಪರವಾಗಿ ಕ್ಷೇತ್ರದ ಹಳ್ಳಿ ಹಳ್ಳಿಗಳಲ್ಲಿ ಉತ್ಸಾಹಭ–ರಿತ ಪ್ರಚಾರ ಕಾರ್ಯಗಳು ನಡೆಯುತ್ತಿವೆ ಎಂದು ಪಕ್ಷದ ವತಿಯಿಂದ ತಿಳಿಸಲಾಗಿದೆ.**

ಕೆ ಆರ್ ಎಸ್ ಪಕ್ಷದ ಅಭ್ಯರ್ಥಿ ಪರವಾದ ಪ್ರಚಾರದಲ್ಲಿ ಮಾತನಾಡಿದ ರಾಜ್ಯ ಉಪಾಧ್ಯಕ್ಷ ಸೋಮಸುಂದರ್ ಅವರು ರೈತರ ಹಿತಾಸಕ್ತಿ, ನೀರಾವರಿ ವ್ಯವಸ್ಥೆಯ ಸುಧಾರಣೆ,ಬೆಳೆಗಳಿಗೆ ನ್ಯಾಯಸಮ್ಮತ ಬೆಲೆ ಮತ್ತು ಗ್ರಾಮೀಣ ಅಭಿವೃದ್ಧಿ ಪ್ರಮುಖ ನಮ್ಮ ಗುರಿ.ಪಕ್ಷದ ಅಭ್ಯರ್ಥಿಯವರ ಪರವಾಗಿ ವಿವಿಧ ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ಭರವಸೆ, ಯುವಕ–



ರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಹಾಗೂ ಸ್ಥಳೀಯ ಅಭಿವೃದ್ಧಿಗೆ ಆದ್ಯತೆ ನೀಡುವುದು ನಮ್ಮಉದ್ದೇಶ ಎಂದು ತಿಳಿಸಿದರು.

ನಿರುಪಾದಿ ಕೆ ಗೋಮರ್ಸಿ ಮಾತನಾಡಿ ಏಖಖ ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ಮತದಾರರನ್ನು ಭೇಟಿ ಮಾಡುತ್ತಿದ್ದು,ಪಕ್ಷದ ತತ್ವಗಳು ಮತ್ತು ಕಾರ್ಯಕ್ರಮಗಳನ್ನು ವಿವ–ರಿಸುತ್ತಿದ್ದಾರೆ.ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ ನಮ್ಮ ಅಭ್ಯರ್ಥಿಯಾಯದ ನಾಗರಾಜ್ ಎಸ್ ಕಲಕುಟಗಾರ್ ಅವರ ಗೆಲವು ನಿಶ್ಚಿತ ಎಂದು ತಿಳಿಸಿ ಕ್ಷೇತ್ರದ ಬದಲಾವಣೆ ಮತ್ತು ರೈತಪರ ಆಡಳಿತಕ್ಕಾಗಿ ಮತದಾರರು ಏಖಖ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಕೆಆರ್‌ಎಸ್ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ರಮೇಶ್ ಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಗಣಪತಿ ರಾಥೋಡ್,ದಯಾನಂದ, ಬಸವನಗೌಡ,ಅಜೀಂ ಸೇರಿದಂತೆ ಕೆ ಆರ್ ಎಸ್ ಪಕ್ಷದ ರಾಜ್ಯ ರೈತ ಘಟಕದ ಕಾರ್ಯದರ್ಶಿ ನಾಗರೆಡ್ಡಿ, ಧಾರವಾಡ ದಾದು, ಮಂಜುನಾಥ ರೆಡ್ಡಿ, ಕೃಷ್ಣಮೂರ್ತಿ,ರಾಜಣ್ಣ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಚಂದ್ರಬಂಡ ಗ್ರಾಮದ ಜಯಲಮ್ಮ ಕಾಣೆ: ಪತ್ತೆಗೆ ಪೊಲೀಸರ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ತಾಲೂಕಿನ ಯಾಪಲದಿನ್ನಿ ಪೊಲೀಸ್ ಠಾಣೆಯ ವ್ಯಾಪ್ತಿಯ ಚಂದ್ರಬಂಡ ಗ್ರಾಮದ ನಿವಾಸಿಯಾದ ಜಯಲಮ್ಮ ಗಂಡ ಹೊನ್ನಪ್ಪ (31) ಎಂಬ ಮಹಿಳೆಯು 2025ರ ಆಗಸ್ಟ್ 12ರ ಬೆಳಿಗ್ಗೆ 9ಗಂಟೆಯ ಸುಮಾರಿಗೆ ಹೊಲಕ್ಕೆ ಹೋಗುತ್ತೇನೆಂದು ಹೋದವರು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಠಾಣೆಯಲ್ಲಿ ಗುನ್ನೆ ನಂ: 66/2025 ಕಲಂರಡಿ ಮಹಿಳೆ ಕಾಣೆ ಪ್ರಕರಣ**



ದಾಖಲಿಸಿಕೊಂಡು ತನಿಖೆ ಕೈಕೊಳ್ಳಲಾಗಿದೆ **ಎಂದು ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.**

ಕಾಣೆಯಾದ ಮಹಿಳೆಯು ಚಂದ್ರಬಂಡ ಸೀಮಾದ ಸರ್ವೆ ನಂಬರ್: 269/1 ಹೊಲದಲ್ಲಿ ಕೆಲಸಕ್ಕೆ ಹೊಗಿದ್ದು, ಸಂಜೆ 6ಗಂಟೆ ಸುಮಾರಿಗೆ ಮನೆಗೆ ಕರೆದುಕೊಂಡು ಬರಲು ಹೋದಾಗ ಮಹಿಳೆಯು ಹೊಲದಲ್ಲಿ ಇರಲಿಲ್ಲ. ಅಕ್ಕಪಕ್ಕದ ಊರಿಗಳಾದ ಗಣಮೂರು, ರಾಯಚೂರು, ಸಿಂಗನೋಡಿ, ಮಂತ್ರಾಲಯ, ಮಾದವರಂ, ಗಿಲ್ಲೆಸ್ಗೂರಿನಲ್ಲಿ ವಿಚಾರಿಸಿದ್ದು ಎಲ್ಲಿಯೂ ಪತ್ತೆಯಾಗಿರುವುದಿಲ್ಲ.

ಚಹರೆ: ಕಾಣೆಯಾದ ಮಹಿಳೆಯ ವಯಸು 31, ಮತ್ತು ಮುಖ ಕೆಂಪು ಮೈ ಬಣ್ಣ, ದುಂಡನೆಯ ಮುಖ, ತಲೆಯಲ್ಲಿ ಉದ್ದನೇಯ ಕಪ್ಪು ಕೂದಲು, ಕಪ್ಪು ಚುಕ್ಕೆಯ ಸೀರೆ ಕಪ್ಪು ಬಣ್ಣದ ಕುಪ್ಪಸ ಧರಿಸಲಾಗಿದ್ದು, ಕನ್ನಡ, ತೆಲುಗು ಭಾಷೆ ಮಾತನಾಡುತ್ತಾಳೆ. ಈ ಕಾಣೆಯಾದ ಮಹಿಳೆಯ ಬಗ್ಗೆ ಸುಳಿವು ಸಿಕ್ಕಲಿ ಯಾಪಲದಿನ್ನಿ ಠಾಣೆ ಪಿಎಸ್‌ಐ ಮೊಬೈಲ್ ಸಂಖ್ಯೆ: 9480803851, ಸಿ.ಪಿ.ಐ ಗ್ರಾಮೀಣ ವೃತ್ತ ಮೊಬೈಲ್ ಸಂಖ್ಯೆ: 9480803832, ಕಂಟ್ರೋಲ ರೂಂ ದೂರವಾಣಿ ಸಂಖ್ಯೆ: 08532–235635, 9480803832ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಯಾಪಲದಿನ್ನಿ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಸದ ಕೆ ರಾಜಶೇಖರ ಹಿಟ್ನಾಳ್ ಹುಟ್ಟುಹಬ್ಬ ಆಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶಾಸಕರ ಕಾರ್ಯಾಲಯದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಕೆ. ರಾಜಶೇಖರ ಹಿಟ್ನಾಳ್ ಅವರ ಹುಟ್ಟುಹಬ್ಬದ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ ಅವರು ಕೇಕ್ ಕತ್ತ–ರಿಸುವ ಮೂಲಕ ಸಂಸದರಿಗೆ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸಿ ಸನ್ಮಾನಿಸಿ ಗೌರವಿಸಿದರು.**

ಈ ಸಂದರ್ಭದಲ್ಲಿ ಸಂಸದರು ಸಾರ್ವಜನಿಕ ಜೀವನದಲ್ಲಿ ನೀಡುತ್ತಿರುವ ಸೇವೆಯನ್ನು ಸ್ಮರಿಸಿ ಮುಖಂಡರು




ಅಭಿನಂದನೆ ಸಲ್ಲಿಸಿದರು. ಕ್ಷೇತ್ರದ ಅಭಿವೃದ್ಧಿ, ಮೂಲಸೌಕರ್ಯಗಳ ವೃದ್ಧಿ ಹಾಗೂ ಜನಪರ ಯೋಜನೆಗಳ ಅನುಷ್ಠಾನದಲ್ಲಿ ಅವರ ಕೊಡುಗೆ ಮಹತ್ವದ್ದಾಗಿದೆ ಎಂದು ಉಪಸ್ಥಿತರಿದ್ದವರು ಅಭಿಪ್ರಾಯಪಟ್ಟರು. ಹುಟ್ಟುಹಬ್ಬದ ಅಂಗವಾಗಿ ಕಾರ್ಯಕರ್ತರು ಸಂಸದರಿಗೆ ಪುಷ್ಪಗುಚ್ಛ ನೀಡಿ ಶುಭಾಶಯಗಳನ್ನು ತಿಳಿಸಿದರು.

ಅಭಿಮಾನಿಗಳು ಕೇಕ್ ಕತ್ತರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಪಕ್ಷದ ಹಿರಿಯ ಮುಖಂಡರು, ಜನಪ್ರತಿನಿಧಿಗಳು, ಯುವ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವು ಆತ್ಮೀಯತೆ ಮತ್ತು ಉತ್ಸಾಹಭರಿತ ವಾತಾವರಣದಲ್ಲಿ ನೆರವೇರಿತು.

# ಜಾಲಹಳ್ಳಿಯಲ್ಲಿ ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದ ಅದ್ದೂರಿ ಬ್ರಹ್ಮರಥೋತ್ಸವ ಜರುಗಿತು

ನೈಜ್ಯ ದೆಸೆ ನ್ಯೂಸ್


**ಜಾಲಹಳ್ಳಿ: ಗ್ರಾಮದ ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದಲ್ಲಿ ಬ್ರಹ್ಮರಥೋತ್ಸವವು 02–04–2026 ಗುರುವಾರ ರಾತ್ರಿ ಸುಮಾರು 8:40ಕ್ಕೆ ಭಕ್ತಿ ಭಾವ ಹಾಗೂ ಅದ್ದೂರಿಯಿಂದ ಜರುಗಿತು. ಸಾವಿರಾರು ಭಕ್ತರು ಭಾಗವಹಿಸಿ ದೇವರ ದರ್ಶನ ಪಡೆದರು. ಬೆಳಗ್ಗಿನಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದವು. ಭಕ್ತರು ಸಹಸ್ರ ಸಂಖ್ಯೆಯಲ್ಲಿ ಆಗಮಿಸಿ ದೀರ್ಘ ದಂಡ ನಮಸ್ಕಾರ ಸಲ್ಲಿಸಿ ಭಕ್ತಿ ಪ್ರದರ್ಶಿಸಿದರು.**

ಮಧ್ಯಾಹ್ನದಿಂದ ಬ್ರಹ್ಮರಥೋತ್ಸವದ ಅಂಗವಾಗಿ ವಿವಿಧ ಸಂಪ್ರದಾಯಗಳು ನೆರವೇ–ರಿದವು. ಊರಿನ ರಾಜವಂಶಸ್ಥರು, ದೊರೆಗಳು, ವತಂದಾರರು, ಪೊಲೀಸ್ ಪಾಟೀಲ್, ಮಾಲಿ ಪಾಟೀಲ್ ಹಾಗೂ ಕುಲಕರ್ಣಿಯವರು ಆಂಜನೇಯ ದೇವಸ್ಥಾನದಲ್ಲಿ ಕಳಸ ಪೂಜೆ ನೆರವೇರಿಸಿ ಮೆರವಣಿಗೆಯ ಮೂಲಕ ರಥದತ್ತ ಕರೆದೊಯ್ದರು. ಬಳಿಕ ನಿಸ್ಸಾಣಿ ಮನೆತನದವರು ಕಳಸವನ್ನು ರಥದಲ್ಲಿ ಪ್ರತಿಷ್ಠಾಪಿಸಿದರು.




ನಂತರ ತಿಮ್ಮಪ್ಪ ದೇವಸ್ಥಾನದಲ್ಲಿ ಲಕ್ಷ್ಮಿ ಪೂಜೆ ನೆರವೇರಿಸಿ,ದೇವಿಯನ್ನುಪಲ್ಲಕ್ಕಿಯಲ್ಲಿ ಕರೆದುಕೊಂಡು ಬಂದು ತೇರಿನ ಬಳಿ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಭಕ್ತರು ನೀರಿನ ಆಟ ಆಡಿ ಸಂಭ್ರಮಿಸಿದರು. ಉತ್ತರ ಕರ್ನಾಟಕ ಭಾಗದಲ್ಲಿ ಈ ನೀರಿನ ಆಟ ಜಾಲಹಳ್ಳಿಯ ರಥೋತ್ಸವದ ವಿಶೇಷ ಆಕರ್ಷಣೆಯಾಗಿದೆ. ಸಂಜೆ ವೇಳೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಚಿಕ್ಕಲ್ ಮನೆತನದವರ ನೇತೃತ್ವದಲ್ಲಿ ರಥ–'ದ ಹಗ್ಗವನ್ನು ತರಲಾಗಿದ್ದು, ನಂತರ ಭಕ್ತರು ಹೊಸ ವಸ್ತ್ರ ಧರಿಸಿ ರಥೋತ್ಸವಕ್ಕೆ ಸಜ್ಜಾದರು. ಊರಿನ ರಾಜವಂಶಸ್ಥರು ಮತ್ತು ವತಂದಾರರ ನೇತೃತ್ವದಲ್ಲಿ ರಸಬುತ್ತಿ ಮನೆಗೆ ತೆರಳಿ, ಅಲ್ಲಿಂದ ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನಕ್ಕೆ ಬಂದು



ಪಲ್ಲಕ್ಕಿ ಸಮೇತ ಮೆರವಣಿಗೆ ಮೂಲಕ ತೇರಿನ ಬಳಿಗೆ ಬಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಗೋಕುಲ್ ಕೃಷ್ಣ ಆಚಾರಿ (ಅರಿಕೇರಿ) ಅವರ ನೇತೃತ್ವದಲ್ಲಿ ಪೂಜೆಗಳು ನಡೆದವು.

ಈ ಸಂದರ್ಭದಲ್ಲಿ ಪೂಜಾ–ರಿಗಳಾದ ಸುರೇಶ್ ಪೂಜಾರಿ, ಗಂಗಾಧರ್ ಪೂಜಾರಿ, ಚಂದ್ರಹಾಸ್ ಪೂಜಾರಿ, ವೆಂಕಟೇಶ್ ಪೂಜಾರಿ ಹಾಗೂ ವರದಾಚಾರ್ಯರ ನೇತೃತ್ವದಲ್ಲಿ ಪೂಜೆಗಳು ನೆರವೇರಿದವು. ರಾಜವಂಶಸ್ಥರಾದ ರಾಜರಂಗಪ್ಪ ನಾಯಕ್, ರಾಜ ರಾಮ್ ಭದ್ರಪ್ಪ ನಾಯಕ್, ರಾಜ ವಾಸುದೇವ ನಾಯಕ್, ರಂಗಪ್ಪ ದೊರೆ, ಕೋಪರೇಶ ರಾವ್ ದೇಸಾಯಿ ಹಾಗೂ ಶ್ರೀಧರ್ ದೇಸಾಯಿ, ಪೊಲೀಸ್ ಪಾಟೀಲ್, ಮಾಲಿ ಪಾಟೀಲ್, ಅವರ ಕಾಯಿ ಒಡೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಭಕ್ತರು ರಥವನ್ನು ಎಳೆಯುತ್ತ ಸಂಜೀವ ಮೂರ್ತಿ ಗುಡಿವರೆಗೆ ಕೊಂಡೊಯ್ದು ಪೂಜೆ ಸಲ್ಲಿಸಿ ಮತ್ತೆ ತೇರಿನ ಜಾಗದ ಬಳಿ ತರಲಾಯಿತು. ನಂತರ ದೇವಸ್ಥಾನಕ್ಕೆ ತೆರಳಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಗುಡಿಯಲ್ಲಿ ತೊಟ್ಟಿಲಲ್ಲಿ ಹಾಕುವ ಕಾರ್ಯಕ್ರಮ ನೆರವೇರುತ್ತದೆ. ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಬ್ರಹ್ಮರಥ–'ೋತ್ಸವ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು, ಊರಿನ ವತಂದಾರರು, ರಾಜವಂಶಸ್ಥರು, ದೇಸಾಯಿಯವರು, ಕುಲಕರ್ಣಿ, ಪೊಲೀಸ್ ಪಾಟೀಲ್, ಮಾಲಿಪಾಟೀಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿ ರಥ–'ೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಆಜಖಿಕ ದತ್ತಾತ್ರೇಯ ಕಾರ್ನಾಡ್ ಅವರ ನೇತೃತ್ವದಲ್ಲಿ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಒದಗಿಸಿತು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Tech in Embedded Systems and VLSI

B.Tech in Embedded Systems and VLSI (Very Large-Scale Integration) ಎಂಬುದು ಎಲೆಕ್ಟ್ರಾನಿಕ್ಸ್ ಚಿಪ್ ವಿನ್ಯಾಸ (Chip Design) ಮತ್ತು ಸ್ಮಾರ್ಟ್ ಸಾಧನಗಳ (Smart Devices) ತಂತ್ರಜ್ಞಾನವನ್ನು ಕಲಿಯುವ 4 ವರ್ಷಗಳ ತಾಂತ್ರಿಕ ಪದವಿಯಾಗಿದೆ. ಇದು ಹಾರ್ಡ್‌ವೇರ್ ವಿನ್ಯಾಸ (VLSI) ಮತ್ತು ಸಾಫ್ಟ್‌ವೇರ್ ಕೋಡಿಂಗ್ (Embedded) ಎರಡನ್ನೂ ಒಳಗೊಂಡಿದ್ದು, AI, 5G, ಮತ್ತು ಆಟೋಮೊಬೈಲ್ ಉದ್ಯೋಗಗಳಿಗೆ ಹೆಚ್ಚಿನ ಅವಕಾಶ ನೀಡುತ್ತದೆ. ಕೋರ್ಸ್‌ನ ಪ್ರಮುಖ ವಿವರಗಳು (Course Details): ಅರ್ಹತೆ (Eligibility): ದ್ವಿತೀಯ ಪಿಯುಸಿ/12ನೇ ತರಗತಿಯಲ್ಲಿ ವಿಜ್ಞಾನ ವಿಭಾಗದಲ್ಲಿ (Physics, Chemistry, Maths) ಉತ್ತೀರ್ಣರಾಗಿರಬೇಕು. ಅವಧಿ (Duration): 4 ವರ್ಷಗಳು (8 ಸೆಮಿಸ್ಟರ್‌ಗಳು). ಪ್ರಮುಖ ವಿಷಯಗಳು (Key Subjects): ಡಿಜಿಟಲ್ ಎಲೆಕ್ಟ್ರಾನಿಕ್ಸ್, ಸರ್ಕ್ಯೂಟ್ ವಿನ್ಯಾಸ (Circuit Design), VLSI ತಂತ್ರಜ್ಞಾನ, ಎಂಬೆಡೆಡ್ ಸಿಸ್ಟಮ್ ವಿನ್ಯಾಸ, ಅ/ಅ++ ಪ್ರೋಗ್ರಾಮಿಂಗ್, ಮೈಕ್ರೋಕಂಟ್ರೋಲರ್‌ಗಳು. ಉದ್ಯೋಗಾವಕಾಶಗಳು (Career Opportunities): ಹಾರ್ಡ್‌ವೇರ್ ವಿನ್ಯಾಸ ಎಂಜಿನಿಯರ್ (Hardware Design Engineer), ವೆರಿಫಿಕೇಶನ್ ಎಂಜಿನಿಯರ್, ಸಿಸ್ಟಮ್ಸ್ ಎಂಜಿನಿಯರ್, ಆರ್&ಡಿ (R&D) ಎಂಜಿನಿಯರ್. ಈ ಕೋರ್ಸ್ ಯಾಕೆ ಆರಿಸಿಕೊಳ್ಳಬೇಕು ಉನ್ನತ ಸಂಬಳ: VLSI ವಿಭಾಗದಲ್ಲಿ ತಾಂತ್ರಿಕ ಕೌಶಲ್ಯ ಹೊಂದಿದವರಿಗೆ ಹೆಚ್ಚಿನ ಸಂಬಳದ ಅವಕಾಶವಿದೆ. ಭವಿಷ್ಯದ ತಂತ್ರಜ್ಞಾನ: AI, 5G, ಮತ್ತು ಸೆಮಿಕಂಡಕ್ಟರ್ ಕ್ಷೇತ್ರಗಳಲ್ಲಿ (Semiconductor Industry) ಭಾರತವು ಬೆಳವಣಿಗೆಯಾಗುತ್ತಿರುವ ಕಾರಣ, ಈ ಕೋರ್ಸ್‌ಗೆ ಹೆಚ್ಚಿನ ಬೇಡಿಕೆಯಿದೆ. ಪ್ರಾತ್ಯಕ್ಷಿಕೆ ಕಲಿಕೆ (Practical Learning): ಇದು ಕೇವಲ ಸಿದ್ಧಾಂತವಲ್ಲ, ಕೈಗಾರಿಕಾ ಮಾನದಂಡದ ಉಪಕರಣಗಳನ್ನು (Industry-Standard Tools) ಬಳಸುವ ತರಬೇತಿಯನ್ನು ನೀಡುತ್ತದೆ. ಕರ್ನಾಟಕದಲ್ಲಿ ಈ ಕೋರ್ಸ್ ಒದಗಿಸುವ ಕೆಲವು ಸಂಸ್ಥೆಗಳು (Colleges): Ballari Institute of Technology and Management (Ballari). BITM (Electronics and Communication related programs).




## ಏ.5ರಂದು ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ: ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಲು ಮನವಿ

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ,



ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯನ್ನು ಏಪ್ರಿಲ್ 5ರ ಬೆಳಿಗ್ಗೆ 11.30ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು,

ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಮಾಜದ ಎಲ್ಲಾ ಮುಖಂಡರು, ವಿವಿಧ ಸಂಘ-ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ: ಹಳೆಯ ವಿದ್ಯಾರ್ಥಿಗಳಿಂದ ಅಪೂರ್ವ ಸಿದ್ಧತೆ.

**ಸಂವಿಧಾನ ಶಕ್ತಿ ನ್ಯೂಸ್**

ಕೆಜಿಎಫ್: ಗುರು-ಶಿಷ್ಯರ ನಡುವಿನ ಅವಿನಾಭಾವ ಸಂಬಂಧವನ್ನು ಮೆಲುಕು ಹಾಕಲು ಹಾಗೂ ಬಾಲ್ಯದ ಗೆಳೆಯರೊಂದಿಗೆ ಹಳೆಯ ನೆನಪುಗಳನ್ನು ಹಂಚಿಕೊಳ್ಳಲು ಸುಂದರಪಾಳ್ಯ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಆವರಣ ಸಾಕ್ಷಿಯಾಗಲಿದೆ.

ದಿನಾಂಕ 05-04-2026ರ ಭಾನುವಾರ, ಈ ಶಾಲೆಯ 1998-99ನೇ ಸಾಲಿನ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಗುರುಗಳಿಗೆ ಗೌರವ ಸಲ್ಲಿಸುವ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಹಮ್ಮಿಕೊಂಡಿದ್ದಾರೆ. ಎರಡು ವಾರಗಳ ಸತತ ತಯಾರಿ ಈ ಅಪೂರ್ವ ಕಾರ್ಯಕ್ರಮಕ್ಕಾಗಿ 1998-99ನೇ ಬ್ಯಾಚ್‌ನ ವಿದ್ಯಾರ್ಥಿಗಳು ಕಳೆದ ಎರಡು ವಾರಗಳಿಂದ ಪೂರ್ವ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ದಶಕಗಳ ಹಿಂದೆ ತಾವು ಕಲಿತ ಶಾಲೆಯ ಆವರಣವನ್ನು ಸಿಂಗರಿಸಲಾಗುತ್ತಿದ್ದು, ದೂರದ ಊರುಗಳಲ್ಲಿ ನೆಲೆಸಿರುವ ಹಳೆಯ ಗೆಳೆಯರನ್ನು ಸಂಪರ್ಕಿಸಿ ಈ ಸಂಭ್ರಮಕ್ಕೆ ಆಹ್ವಾನಿಸಲಾಗಿದೆ.



ತಮಗೆ ಅಕ್ಷರ ಕಲಿಸಿ, ಬದುಕಿನ ದಾರಿ ತೋರಿಸಿದ ಗುರುಗಳನ್ನು ಖುದ್ದಾಗಿ ಭೇಟಿ ಮಾಡಿ ಆಹ್ವಾನ ನೀಡಿರುವುದು ಈ ಕಾರ್ಯಕ್ರಮದ ವಿಶೇಷ. ಧಾರ್ಮಿಕ ಕಾರ್ಯಕ್ರಮಗಳ ಸಾರಥ್ಯ ಸ್ನೇಹ ಸಮ್ಮಿಲನದ ಅಂಗವಾಗಿ ಶಾಲಾ ಆವರಣದಲ್ಲಿರುವ ವಿದ್ಯಾ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ ವಿಜೃಂಭಣೆಯ ಪಂಚಾಮೃತ ಅಭಿಷೇಕ, ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗ ನಡೆಯಲಿದೆ. ತಮಗೆ ಪಾಠ ಮಾಡಿದ ಗುರುಗಳನ್ನು ಸನ್ಮಾನಿಸಿ, ಅವರಿಂದ ಆಶೀರ್ವಾದ ಪಡೆಯುವುದರ ಜೊತೆಗೆ, ಹಳೆಯ ಮಿತ್ರರೊಂದಿಗೆ ಸಮಾಲೋಚನೆ ನಡೆಸಲು ಈ ವೇದಿಕೆ ಸಜ್ಜಾಗಿದೆ. ಈ ಕಾರ್ಯಕ್ರಮಕ್ಕೆ 1998-99ನೇ ಸಾಲಿನ ಎಲ್ಲಾ ಹಳೆಯ ಮಿತ್ರರು ಹಾಗೂ ಅವರ ಕುಟುಂಬ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಆ ಸಾಲಿನ ವಿದ್ಯಾರ್ಥಿ ತಂಡವು ಪ್ರೀತಿಯಿಂದ ಸ್ವಾಗತ ಕೋರಿದೆ.

# ಆಂದ್ರಪ್ರದೇಶದ ಜನತೆಗೆ ಪುಣ್ಯ ಭೂಮಿ ಕರ್ನಾಟಕ ತಾಯಿ ಪ್ರೀತಿ ಕೊಟ್ಟಿದೆ: ನಾರಾ ಲೋಕೇಶ ಅಭಿಪ್ರಾಯ

## ಕುಮಾರಸ್ವಾಮಿ, ನಾರಾ ಲೋಕೇಶರಿಂದ ಭರ್ಜರಿ ರೋಡ್ ಶೋ ಅದ್ದೂರಿ ಸ್ವಾಗತ ಕೋರಿದ ಸಿಬ್ಬಂದಿ

**ನೈಜ್ಯ ದೆಸೆ ನ್ಯೂಸ್**

**ಸೈನಿಕ ಶಾಲೆ ಉದ್ಘಾಟನೆ, ಎನ್ ಟಿ ಆರ್ ಅವರ ಪುತ್ಥಳಿ ಅನಾವರಣಗೊಳಿಸಲು ಭಾನುವಾರದಂದು ನಗರಕ್ಕೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿಕೆ ಹಾಗೂ ಆಂಧ್ರಪ್ರದೇಶ ಸರ್ಕಾರದ ಸಚಿವ ನಾರಾ ಲೋಕೇಶ, ರಾಜ್ಯ ರಕ್ಷಣಾ ಸಚವ ಸಂಜಯ ಸೇಠ್ ಅವರಿಗೆ ಸೈನಿಕ ಶಾಲೆ ಸಿಬ್ಬಂದಿಗಳು ಅದ್ದೂರಿ ಸ್ವಾಗತ ಕೋರಿದರು. ನಗರದ ಪಿಡಬ್ಲ್ಯೂಡಿ ಕ್ಯಾಂಪಿನಿಂದ ಗಾಂಧಿವೃತ್ತದ ತನಕವು ಬೃಹತ್ ಬೈಕ್ ರ್‍ಯಾಲಿ ನಡೆಸಲಾಯಿತು.**

ಮಹಾತ್ಮಗಾಂಧಿ ವೃತ್ತದಿಂದ ಕಮ್ಮವಾರಿ ಕಲ್ಯಾಣ ಮಂಟಪದವರೆಗೂ ತೆರೆದ ವಾಹನದಲ್ಲಿ ಅದ್ದೂರಿ ಮೆರವಣಿಗೆಯಲ್ಲಿ ಪಾಲ್ಗೊಂಡು ದಾರಿ ಉದ್ದಕ್ಕೂ ಸೇರಿದ್ದ ಜನರತ್ತ ಕೈಬೀಸುತ್ತಾ ಹಾಲಿ ಮತ್ತು ಮಾಜಿ ಸಚಿವರು ಕಮ್ಮವಾರಿ ಕಲ್ಯಾಣ ಮಂಟಪ ತಲುಪಿದರು. ಅಲ್ಲಿ ಕಮ್ಮವಾರಿ ಕಲ್ಯಾಣ ಮಂಟಪದ ಮುಂಭಾಗದಲ್ಲಿ ಎನ್.ಟಿ.ರಾಮರಾವ್ ಅವರ ಪುತ್ಥಳಿ ಲೋಕಾರ್ಪಣೆಗೊಳಿಸಿದರು. ನಗರದ ಕಮ್ಮವಾರಿ ಕಲ್ಯಾಣ ಮಂಟಪದಲ್ಲಿ ಶನಿವಾರ ಎನ್.ಟಿಆರ್ ಅವರ ಪುತ್ಥಳಿ ಅನಾವರಣಗೊಳಿಸಿ ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿ, ಕರ್ನಾಟಕದ ಮಣ್ಣಿನ ಋಣ ತೀರಿಸಲು ನಾನು ಇಲ್ಲಿಗೆ ಬಂದಿದ್ದೇನೆ.

1970ರ ದಶಕದಲ್ಲಿ ಕರ್ನಾಟಕಕ್ಕೆ ವಲಸಿಗರಾಗಿ ಬಂದು, ಇಲ್ಲಿ ನೆಲೆಸಿದ ಆಂಧ್ರಪ್ರದೇಶದ ಜನತೆಗೆ ಕರ್ನಾಟಕ ಎಲ್ಲ ರೀತಿಯ ಸೌಕರ್ಯಗಳನ್ನು ನೀಡುವ ಮೂಲಕ ತಾಯಿ ಪ್ರೀತಿ, ಮಮತೆಯನ್ನು ನೀಡಿದೆ. ಕನ್ನಡ ಮತ್ತು ಕರ್ನಾಟಕದ ಋಣವನ್ನು ನಮ್ಮ ಆಂದ್ರಪ್ರದೇಶದ ಜನರು ಎಂದಿಗೂ ಮರೆಯಬಾರದು




ಕರ್ನಾಟಕ ತಾಯಿ ಇದ್ದಂತೆ, ತಾಯಿ ಭುವನೇಶ್ವರಿಯ ಮಮತೆಯಲ್ಲಿ ಆಂಧ್ರಪ್ರದೇಶದವರು ಇಲ್ಲಿ ನೆಲೆಸಿ ಬದುಕುತ್ತಿದ್ದಾರೆ ಎಂದು ಆಂಧ್ರಪ್ರದೇಶದ ಐಟಿ ಮತ್ತು ಶಿಕ್ಷಣ ಇಲಾಖೆ ಸಚಿವ ನಾರಾ ಲೋಕೇಶ್ ಹೇಳಿದರು. ನಂತರ ಭಾರಿ ಕೈಗಾರಿಕೆ ಮತ್ತು ಹುಕ್ಕು ಕಾರ್ಖಾನೆ ಸಚಿವ ಕುಮಾರಸ್ವಾಮಿ ಮಾತನಾಡಿ, ರಾಯಚೂರಲ್ಲಿ ಸುಮಾರು ಒಂದೂವರೆ ವರ್ಷದಿಂದ ಏಮ್ಸ್‌ಗಾಗಿ ಹೋರಾಟ ನಡೆಸಿದ್ದು, ನನ್ನ ಗಮನಕ್ಕೆ ಇದೆ.

ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದರೆ ಕೇಂದ್ರದಲ್ಲಿ ನಾನು ಒತ್ತಡ ಹಾಕಿ ಏಮ್ಸ್ ಕೊಡಿಸುವ ಪ್ರಯತ್ನ ಮಾಡುವೆ ಹಾಗೆ ಸ್ಥಳೀಯ ಶಾಸಕರ ಮನವಿಯಂತೆ ಕೈಗಾರಿಕೆಗಳು ಸ್ಥಾಪನೆ ಮಾಡಿ, ವಿದ್ಯಾವಂತರಿಗೆ ಉದ್ಯೋಗ ಕೊಡುವ ಕೆಲಸ ಮಾಡಿ ಎಂದು ಮನವಿ ಮಾಡಿದ್ದಾರೆ ಅದನ್ನು ಕೂಡ ಮುಂದಿನ ದಿನಗಳಲ್ಲಿ ಮಾಡುವಂತಹ ಕೆಲಸ ಮಾಡುತ್ತೇನೆ, ನಾನು ಎರಡನೇ ಬಾರಿಗೆ ಕಾಂಗ್ರೆಸ್ಸಿನವರ ಜೊತೆಗೆ ಮುಖ್ಯಮಂತ್ರಿಯಾಗಿದ್ದೆ, ಆಗ ರಾಜ್ಯದ 9 ಜಿಲ್ಲೆಗಳಲ್ಲಿ ಇಂತಹ ಕೈಗಾರಿಕೆ ಸ್ಥಾಪನೆಯ ಕನಸು ಕಂಡಿದ್ದೆ, ಬೀದರ್ ನಲ್ಲಿ ಕೃಷಿ ಉತ್ಪನ್ನ, ಕಲ್ಬುರ್ಗಿಯಲ್ಲಿ ಸೋಲಾರ್, ಕೊಪ್ಪಳದಲ್ಲಿ ಎಲೆಕ್ಟ್ರಾನಿಕ್ ಹರಬನ್, ಬಳ್ಳಾರಿಯಲ್ಲಿ ಜೀನ್ಸ್ ಪ್ಯಾಕ್ಟರಿ, ಹೀಗೆ 9 ಜಿಲ್ಲೆಗಳಲ್ಲಿ ಸೂಕ್ತವಾದ ಯುವಕರಿಗೆ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ಕೊಡುವುದಾಗಿತ್ತು.

ಪ್ರತಿಯೊಂದು ಜಿಲ್ಲೆಗೆ 25 ಸಾವಿರಕ್ಕೂ ಹೆಚ್ಚು ಯುವಕರಿಗೆ ಉದ್ಯೋಗ ಕೊಡುವ ನಿರ್ಧಾರ ಮಾಡಿದ್ದೆ, ಆದರೆ ಬದಲಾದ ಕಾಲದಲ್ಲಿ ಸರ್ಕಾರ ಹೋಯಿತು ಅದು ಕೂಡ ನೆನೆಗುದಿಗೆ ಬಿತ್ತು. ಎಂದು ಮೇಲುಕು ಹಾಕಿದರು. ಸೈನಿಕ ಶಾಲೆ ಕೊಡುವುದಿಕ್ಕೆ ಕಷ್ಟವಿತ್ತು ಆದರೆ ನಿರಂತರ ಒತ್ತಡ ಹಾಕಿ ಸೈನಿಕ ಶಾಲೆ ಕೊಡಿಸಲಿಕ್ಕೆ ಪ್ರಯತ್ನ ಮಾಡಿದ್ದೇನೆ, ನಾರಾ ಲೋಕೇಶ ಅವರು ಸೌಜನ್ಯ ಸ್ವಭಾವದವರು, ಜನರ ಮಧ್ಯೆ ಬಾಂಧವ್ಯ ಬೆಸೆದವರು, ಜನರನ್ನ ಅಪ್ಪಿಕೊಳ್ಳುವ ದೊಡ್ಡ ಶಕ್ತಿ ದೇವರು ಅವರಿಗೆ ಕೊಟ್ಟಿದ್ದಾನೆ ಎಂದು ಕೊಂಡಾಡಿದರು. ಮಾಜಿ ಸಚಿವ ನಾಡಗೌಡ ಮಾತನಾಡಿ, ಈ ನಾರಾ ಲೋಕೇಶ ಅವರಿಗೆ ದೂರದ ಆಂದ್ರಪ್ರದೇಶ ಜನ್ಮ ಭೂಮಿಯಾದರೆ, ಕರ್ನಾಟಕ ಕರ್ಮ ಭೂಮಿಯಾಗಿದೆ. ಶ್ರೀಕೃಷ್ಣದೇವರಾಯ ಶಾಲೆ ಪ್ರಾರಂಭವಾಗಿ 40 ವರ್ಷ ಕಳೆದಿದೆ. ಹೊಸದಾಗಿ ಸೈನಿಕ ಶಾಲೆಗೆ ಅರ್ಜಿಯನ್ನು ಸಲ್ಲಿಸುತ್ತಿದ್ದೇವೆ ಎಂದು ಹೇಳಿದಾಗ ದೇವೆಗೌಡರಿಗೆ ಮಾತನಾಡಿದೆ, ಕುಮಾರಸ್ವಾಮಿಯವರು ಮಾಡಿಸಿ ಕೊಟ್ಟರು ಅವರಿಗೆ ಅಭಿನಂದನೆಗಳು ಎಂದರು.

ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, ಈ ಭಾಗದ ಜೀವನಾಡಿ ತುಂಗಭದ್ರಾ ಆಣೆಕಟ್ಟಿಗೆ ಹೆಚ್ಚು ಕಾಳಜಿ ವಹಿಸಿ ಹೂಳು ತುಂಬಿ 33 ಟಿಎಂಸಿ ನೀರನ್ನು ಸಂಗ್ರಹ ಮಾಡಿ, ರೈತರು ಸಂಪೂರ್ಣ ಎರಡು ಬೆಳೆ ಬೆಳೆಯಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಂದ್ರ ಸಚಿವರಲ್ಲಿ ಮನವಿ ಇಟ್ಟರು. ರಾಜ್ಯ ರಕ್ಷಣಾ ಸಚಿವ ಸಂಜಯ್ ಸೇಠ್ ಹಾಗೂ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಮಾತನಾಡಿದರು. ಕೇಂದ್ರದಲ್ಲಿ ಕುಮಾರಣ್ಣ ಮಂತ್ರಿಯಾದ ಮೇಲೆ ವಿಶೇಷ ಕಾಳಜಿವಹಿಸಿ ಮತ್ತೆ ಸ್ಟೀಲ್ ಪ್ಯಾಕ್ಟರಿಯನ್ನ ಪುನಃ ಆರಂಭಿಸಿದ್ದಾರೆ. ಗ್ರೀನ್ ಫೀಲ್ಡ್, ಗ್ರೀನ್ ಕಂಪನಿ, ಆಂಧ್ರಪ್ರದೇಶದಕ್ಕೆ ಬರಲು ಕುಮಾರಸ್ವಾಮಿಯವರೇ ಕಾರಣ ಎಂದು ತಮ್ಮ ಭಾಷಣದುದ್ದಕ್ಕೂ ಹೆಚ್ಡಿಕೆ ಅವರನ್ನು ಹಾಡಿ ಹೊಗಳಿದರು.) ಈ ವೇಳೆ: ವೇದಿಕೆ ಮೇಲೆ ರಾಜಶೇಖರ ಹಿಟ್ನಾಳ್, ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ವಿಶಾಖಪಟ್ಟಣಂ ಸಂಸದ ಭರತ್, ಬಿ.ವೆಂಕಟರಾವ್, ಕ್ಲಬ್ ಕಾಕತೀಯ ಶ್ರೀನಿವಾಸ, ಕುಮಾರ ನಾಯಕ, ಅಮೃತ ಕನ್ಸಟ್ರಕ್ಸನ್ ಪಿ.ವಿ.ರಾವ್ ಬಿಜಾಪುರ ಸೈನಿಕ ಶಾಲೆಯ ಪ್ರಾಂಶುಪಾಲರಾದ ರಾಜಲಕ್ಷ್ಮಿ, ಸೇರಿದಂತೆ ಅನೇಕ ಗಣ್ಯರಿದ್ದರು.

### (ಹೆಚ್ಡಿಕೆ ಅವರನ್ನು ಕೊಂಡಾಡಿದ ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ..!

**ದೇವೆಗೌಡರ ಕುಟುಂಬಕ್ಕೆ ಹಾಗೂ ನಮ್ಮ ಕುಟುಂಬಕ್ಕೆ ಅವಿನಾಭಾವ ಸಂಬಂಧವಿದೆ. ಚಂದ್ರಬಾಬು ನಾಯ್ಡು ಮತ್ತು ದೇವೆಗೌಡರು ಕೇಂದ್ರದಲ್ಲಿ ಕೆಲಸ ಮಾಡಿದ್ದಾರೆ. ಈಗ ನಾನು ಮತ್ತು ಕುಮಾರಸ್ವಾಮಿಯವರು ಜೊತೆ ಜೊತೆಗೆ ಕೆಲಸ ಮಾಡುತ್ತಿದ್ದೇವೆ. ಮಾಜಿ ಮುಖ್ಯಮಂತ್ರಿ ಜಗನ್ ಮೋಹನ್ ಸರ್ಕಾರದಲ್ಲಿ ವೈಜಾಕ್ ಸ್ಟೀಲ್ ಪ್ಯಾಕ್ಟರಿಯನ್ನು ದುರುದ್ದೇಶದ ಕಾರಣದಿಂದ ಅದನ್ನು ಮುಚ್ಚಿಸಲಾಗಿತ್ತು.**

### ವಿಶೇಷ ಆಸನ ತೆಗೆಯಿಸಿ ಸರಳ ಸಜ್ಜನಿಕೆ ಮೆರೆದ ನಾರಾ ಲೋಕೇಶ

**ಪುತ್ಥಳಿ ಅನಾವರಣ ಹಿನ್ನಲೆಯಲ್ಲಿ ಆಯೋಜಿಸಿದ್ದ ವೇದಿಕೆಯಲ್ಲಿ ನಾರಾ ಲೋಕೇಶ ಅವರಿಗೆ ವಿಶೇಷ ಆಸನದ ವ್ಯವಸ್ಥೆ ಮಾಡಲಾಗಿತ್ತು. ಇನ್ನಿತರೆ ಗಣ್ಯರಿಗೆ ಬೇರೆ ಆಸನಗಳನ್ನು ಹಾಕಿಸಲಾಗಿತ್ತು. ವಿಶೇಷ ಆಸನದಲ್ಲಿ ಕುಮಾರಸ್ವಾಮಿಯವರನ್ನು ಕುಳಿತುಕೊಳ್ಳಲು ನಾರಾ ಲೋಕೇಶ ಒತ್ತಾಯಿಸಿದರು. ಕುಮಾರಸ್ವಾಮಿ ನಿರಾಕರಿಸಿದ ಹಿನ್ನಲೆ ತಾವು ಸಹ ಆ ವಿಶೇಷ ಆಸನದಲ್ಲಿ ಕುಳಿತುಕೊಳ್ಳದೇ ಆಸನವನ್ನು ತೆಗೆಯಿಸಿ, ಸಾಧಾರಣ ಖುರ್ಚಿಯಲ್ಲಿ ಕುಳಿತುಕೊಳ್ಳುವ ಮೂಲಕ ಸರಳತೆ ಮರೆದರು. ವೇದಿಕೆ ಮುಂಭಾಗದಲ್ಲಿ ಇದ್ದವರು ನಾರಾ ಲೋಕೇಶ ಅವರ ಸರಳತೆ ಕಂಡು ಅಭಿಮಾನಿಗಳು ಅವರ ಪರ ಜೈಕಾರ ಹಾಕಿ ಘೋಷಣೆ ಕೂಗಿದ ಪ್ರಸಂಗವು ಒಂದು ಕ್ಷಣ ನಡೆಯಿತು.)**

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.